ವಿಶ್ವವಾಣಿ
ವಿಶ್ವಾಸವೇ ವಿಶ್ವ

2 ದಿನಗಳಲ್ಲಿ ಕೆಜಿ ಬೆಳ್ಳಿಗೆ ₹ 35000 ಬೆಲೆಯೇರಿಕೆ

ಚಿನ್ನ ಹಾಗೂ ಬೆಳ್ಳಿ ಬೆಲೆ ಭಾರೀ ಪ್ರಮಾಣದಲ್ಲಿ ಏರುತ್ತಿದೆ. ಭಾರತದಲ್ಲಿ 10 ಗ್ರಾಮ್ ಚಿನ್ನದ ಬೆಲೆ ಮಂಗಳವಾರ 159,820 ರೂಪಾಯಿಗೆ ಏರಿಕೆಯಾಗಿದೆ. ಒಂದು ಕೆಜಿ ಬೆಳ್ಳಿಯ ಬೆಲೆಯ ಕೇವಲ ಎರಡು ದಿನಗಳಲ್ಲಿ 35,000 ರುಪಾಯಿ ಏರಿದೆ. ಭಾನುವಾರ ಕೆಜಿಗೆ 3,35,000 ರು. ಇತ್ತು. ಸೋಮವಾರ ಬೆಲೆ 3.60 ಲಕ್ಷ ರು.ಗೇರಿತು. ಮಂಗಳವಾರ ಇನ್ನೂ 10000 ರು. ಹೆಚ್ಚಾಯಿತು. ಈ ಮೂಲಕ ಬೆಳ್ಳಿ ಎಲ್ಲಾ ದಾಖಲೆ ಮುರಿದಿದೆ. ಬೆಳ್ಳಿಯ ಬೆಲೆ ಏರಿಕೆ ಪ್ರಮಾಣದ ಮುಂದೆ ಬಂಗಾರ ಹಿಂದಿದೆ.

ಸೊಂಪಾದ ಪುಟಗಳು

ರಾಜ್ಯಪಾಲ ಹುದ್ದೆಯನ್ನು ರದ್ದುಗೊಳಿಸ ಬಾರದೇಕೆ?
ಜನಪಥ
ರಾಘವ ಶರ್ಮ ನಿಡ್ಲೆ 6

ಶಿಕ್ಷಣ ಮಕ್ಕಳಿಗಷ್ಟೇ ಅಲ್ಲ, ಸರಕಾರಕ್ಕೂ ಬೇಕಿದೆ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಪ್ರತಿದಿನ ಆಕಾಶದಲ್ಲಿ ಸೂರ್ಯ ಉದಯಿಸುವಂತೆ, ಪ್ರತಿಯೊಬ್ಬರ ಜೀವನದಲ್ಲೂ ಹೊಸ ಆಸೆ ಮತ್ತು ಅವಕಾಶಗಳ ಸೂರ್ಯ ಉದಯಿಸುತ್ತಾನೆ. ಪ್ರತಿದಿನ ಸೂರ್ಯೋದಯವಾಗುತ್ತಿದ್ದಂತೆ ನಮ್ಮ ಆಸೆ ಮತ್ತು ಅವಕಾಶಗಳನ್ನು ಬೆಳಗಿಸಿಕೊಳ್ಳಲು ಪ್ರಯತ್ನಿಸಬೇಕು.

ವಕ್ರತುಂಡೋಕ್ತಿ

ಫೋಟೊಕ್ಕೆ ಪೋಸ್ ಕೊಡುವ ಒಂದು ಸಮಸ್ಯೆ ಅಂದ್ರೆ, ಹೊಟ್ಟೆಯನ್ನು ಹಿಂದಕ್ಕೆ ಬಿಗಿಯಾಗಿ ಎಳೆದುಕೊಳ್ಳುವುದು.

ವಿನಯ್ ಕುಲಕರ್ಣಿ ಜಾಮೀನು ವಜಾ

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣ ದಲ್ಲಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಚಿವ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದ್ದ ಹಿನ್ನೆಲೆಯಲ್ಲಿ ಬಂಧನಕ್ಕೊಳಗಾಗಿದ್ದ ವಿನಯ್ ಕುಲಕರ್ಣಿ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರು ಕೈಗೆತ್ತಿಕೊಂಡರು. ಅರ್ಜಿದಾರರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದೆ.

ವಿಟಮಿನ್ ಮಾತ್ರೆ: 53 ಮಕ್ಕಳು ಆಸ್ಪತ್ರೆಗೆ

ಭದ್ರಾವತಿ: ಮಕ್ಕಳಲ್ಲಿ ಏಕಾಏಕಿ ಹೊಟ್ಟೆ ನೋವು– ವಾಂತಿ ಕಾಣಿಸಿಕೊಂಡ ಪರಿಣಾಮ 53 ಮಕ್ಕಳು ಆಸ್ಪತ್ರೆಗೆ ದಾಖಲಾದ ಘಟನೆ ಭದ್ರಾವತಿ ತಾಲೂಕಿನ ಅರಳೀಹಳ್ಳಿ ಸರಕಾರಿ ಶಾಲೆಯಲ್ಲಿ ಮಂಗಳವಾರ ನಡೆದಿದೆ. ಮಧ್ಯಾಹ್ನ ಊಟದ ಬಳಿಕ ಮಕ್ಕಳಲ್ಲಿ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಊಟದ ಬಳಿಕ ಮಕ್ಕಳಿಗೆ ಶಿಕ್ಷಕರು ವಿಟಮಿನ್ ಮತ್ತು ಐರನ್ ಟ್ಯಾಬ್ಲೆಟ್ ವಿತರಿಸಿದ್ದರು. ಇದನ್ನು ನುಂಗಿದ ಬಳಿಕ ಮಕ್ಕಳು ವಾಂತಿ ಮಾಡಿಕೊಂಡಿದ್ದಾರೆ.

ವಿಧಾನಸಭೆ ಅಧಿವೇಶನದ ನಡುವೆ ಪರಸ್ಪರ ಹೋರಾಟಕ್ಕಿಳಿದ ಕೈ-ಕಮಲ ಪಕ್ಷಗಳು

ರಾಮ್ ಜಿ ಬೇಡ, ನರೇಗಾ ಬೇಕು: ರಾಜ್ಯಪಾಲಗೆ ಸಿಎಂ ಸಿದ್ದು, ಡಿಸಿಎಂ ಡಿಕೆ ಮನವಿ

ಅಬಕಾರಿ ಹಗರಣ ತನಿಖೆ ಮಾಡಿ, ರಾಜ್ಯಪಾಲರಿಗೆ ಅವಮಾನ ಸಲ್ಲ: ಬಿಜೆಪಿ ಧರಣಿ

ಕಾಂಗ್ರೆಸ್ Vs ಬಿಜೆಪಿ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಕೇಂದ್ರ ಸರಕಾರದ ವಿಬಿ ಜಿ ರಾಮ್‌ಜಿ ಕಾಯಿದೆ ವಿರುದ್ಧ ಹೋರಾಟ ಮುಂದುವರಿಸಿರುವ ಕಾಂಗ್ರೆಸ್ ನೇತೃತ್ವದ ಕರ್ನಾಟಕ ರಾಜ್ಯ ಸರಕಾರ, ರಾಮ್ ಜಿ ಕೈಬಿಟ್ಟು ನರೇಗಾ ಮರುಸ್ಥಾಪಿಸಬೇಕು ಎನ್ನುವ ಆಗ್ರಹವನ್ನು ರಾಜ್ಯಪಾಲರ ಮೂಲಕ ಕೇಂದ್ರ ಸರಕಾರಕ್ಕೆ ರವಾನಿಸಿದೆ.

ವಿಬಿ ಜಿ ರಾಮ್ ಜಿ ಕಾಯಿದೆ ವಿರೋಧಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಲೋಕಭವನ ಚಲೋ ನಡೆಸಿದ ನಾಯಕರು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾಗಿ, ಸರಕಾರದಿಂದ ಅಧಿಕೃತ ಮನವಿಯನ್ನು ಸಲ್ಲಿಸಿದರು. ಸುದೀರ್ಘ ಪತ್ರದಲ್ಲಿ, ನರೇಗಾ ಯೋಜನೆಯಿಂದ ಆಗುತ್ತಿದ್ದ ಲಾಭ ಹಾಗೂ ರಾಮ್ ಜಿ ಕಾಯಿದೆಯಲ್ಲಿರುವ ಲೋಪಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಇಂತಹ ಬೃಹತ್ ಯೋಜನೆಯನ್ನು ಬದಲಾಯಿಸುವ ವೇಳೆ, ರಾಜ್ಯ ಸರಕಾರಗಳೊಂದಿಗೆ ಚರ್ಚಿಸಿಲ್ಲ. ಆದ್ದರಿಂದ ಈ ಹಿಂದಿರುವ ಮನರೇಗಾ ಯೋಜನೆಯನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದ್ದಾರೆ. ಇದಕ್ಕೂ ಮೊದಲು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯ ಕರು, ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿ ದರು. ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಸಚಿವರು, ಶಾಸಕರು ಕೆಪಿಸಿಸಿ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗ ವಹಿಸಿದ್ದರು. ಫ್ರೀಡಂ ಪಾರ್ಕ್‌ನಿಂದ ಲೋಕಭವನ ಚಲೋಗೆ ಮುಂದಾದ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಬಸ್‌ನಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರಮುಖ ನಾಯಕರು ಲೋಕಭವನಕ್ಕೆ ತೆರಳಿದರು. → 9



ಫ್ರೀಡಮ್ ಪಾರ್ಕ್‌ಲ್ಲಿ ವಿಬಿ ಜಿ ರಾಮ್ ಜಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಿತು. ಬಳಿಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ನೇತೃತ್ವದಲ್ಲಿ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಗೆಹ್ಲೋಥ್‌ಗೆ ಮನವಿ ಸಲ್ಲಿಸಲಾಯಿತು.

ಏನೇನು ನಡೆಯಿತು?

- ವಿಬಿ ಜಿ ರಾಮ್ ಜಿ ಕಾಯಿದೆಗೆ ವಿರುದ್ಧ ಆಕ್ರೋಶ ಹೊರಹಾಕಿದ ಕಾಂಗ್ರೆಸ್
- ಲೋಕಭವನ ಚಲೋ, ರಾಜ್ಯಪಾಲ ಗೆಹ್ಲೋಥ್‌ಗೆ ಮನವಿ ಸಲ್ಲಿಸಿದ ಕೈ ಪಡೆ
- ಲೋಕಭವನಕ್ಕೆ ನುಗ್ಗಲು ಯತ್ನಿಸಿದ ಕೈ ಕಾರ್ಯಕರ್ತರ ಬಂಧನ, ಬಿಡುಗಡೆ
- ವಿಧಾನಸೌಧ ಆವರಣದಲ್ಲಿರುವ ಗಾಂಧಿಪ್ರತಿಮೆಯಡಿ ಬಿಜೆಪಿ ಪ್ರತಿಭಟನೆ
- ಅಬಕಾರಿ ಹಗರಣವನ್ನು ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆಗೆ ಆಗ್ರಹ

ಬಡವರ ಸಂವಿಧಾನಬದ್ಧ ಕೆಲಸದ ಹಕ್ಕನ್ನು ವಿಬಿ ಜಿ ರಾಮ್ ಜಿ ಕಸಿದುಕೊಂಡಿದೆ. ಕೇಂದ್ರ ಸರಕಾರದ ಜನ ವಿರೋಧಿ ನೀತಿಯನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆ. ವಿಬಿ ರಾಮ್ ಜಿ ರದ್ದುಪಡಿಸಿ ನರೇಗಾ ಪುನರ್ ಸ್ಥಾಪನೆಯಾಗುವ ತನಕ ಹೋರಾಟ ಮುಂದುವರೆಸುತ್ತೇವೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮನರೇಗಾ ನಮ್ಮ ಹೃದಯಕ್ಕೆ ಹತ್ತಿರವಾಗಿರುವ ಕಾನೂನು. ರಾಜ್ಯದ ಸುಮಾರು 5700 ಪಂಚಾಯಿತಿಗಳಲ್ಲಿ ಪ್ರತಿ ವರ್ಷ ಈ ಯೋಜನೆಯಿಂದ 6 ಸಾವಿರ ಕೋಟಿ ರು. ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದವು. ವಿಶ್ವಬ್ಯಾಂಕ್ ಕೂಡ ಈ ಯೋಜನೆಯನ್ನು ಶ್ಲಾಘಿಸಿತ್ತು.
-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ರಾಜ್ಯ ಸರಕಾರದ ವೈಫಲ್ಯಗಳನ್ನು ಬೇರೆಡೆ ತಿರುಗಿಸಲು ಕಾಂಗ್ರೆಸ್ ಜಿ ರಾಮ್ ಜಿ ಕಾಯಿದೆ ವಿರುದ್ಧ ಹೋರಾಟ ನಡೆಸುತ್ತಿದೆ. ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರಿಗೆ ಅಪಮಾನ ಮಾಡಲಾಗಿದೆ.
-ಆರ್. ಅಶೋಕ್, ಪ್ರತಿಪಕ್ಷ ನಾಯಕ

ರಾಜ್ಯಪಾಲರಿಗೆ ಜಂಟಿ ಅಧಿವೇಶನದ ಸಂದರ್ಭ ದಲ್ಲಿ ಅಪಮಾನ ಮಾಡಿ ಮಾಡಿದ್ದೇ ಸರಿ ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಮಾನ ಮರ್ಯಾದೆ ಬಿಟ್ಟು ಲೋಕಭವನಕ್ಕೆ ಮುತ್ತಿಗೆ ಹಾಕಿದ್ದಾರೆ. ಯಾವ ಪುರುಷಾರ್ಥಕ್ಕಾಗಿ ಕಾಂಗ್ರೆಸ್ ನಾಯಕರ ಈ ಮುತ್ತಿಗೆ?
-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ನಮಗೆ ತನಿಖೆ ಬೇಕು: ಪ್ರತಿಪಕ್ಷ

ವಿಧಾನಸೌಧದ ಗಾಂಧಿ ಪ್ರತಿಮೆಯೆದುರು ಬಿಜೆಪಿ–ಜೆಡಿಎಸ್ ಹೋರಾಟ.

6000 ಕೋಟಿ ರು. ಅಬಕಾರಿ ಹಗರಣ

ರಾಜ್ಯದಲ್ಲಿ ನಡೆದಿರುವ ಆರು ಸಾವಿರ ಕೋಟಿ ರು.ಗೂ ಅಧಿಕ ಮೊತ್ತದ ಅಬಕಾರಿ ಹಗರಣದ ತನಿಖೆಯನ್ನು ಹೈಕೋರ್ಟ್ ಹಾಲಿ ನ್ಯಾಯಾಧೀಶರು ಅಥವಾ ಸಿಬಿಐ ನಡೆಸಬೇಕು ಎಂದು ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಸೌಧದ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ಸಿನ ಗೂಂಡಾಗಳು ಸದನದಲ್ಲಿ ಮಾನ್ಯ ರಾಜ್ಯಪಾಲರ ಜತೆ ಗೂಂಡಾ ವರ್ತನೆ ತೋರಿದ್ದನ್ನು ದೇಶದ ಜನರು ನೋಡಿದ್ದಾರೆ. ಅಬಕಾರಿ ಹಗರಣದಲ್ಲಿ ಸ್ವತಃ ಅಬಕಾರಿ ಸಚಿವರ ಹೆಸರು ಕೇಳಿಬರುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಭಾಗವಹಿಸಿದ್ದರು.

ರಾಜ್ಯದ ಗ್ರಾಪಂಗಳಿಗೆ ಗಾಂಧಿ ಹೆಸರು: ಸಿಎಂ

ಬೆಂಗಳೂರು: ಕರ್ನಾಟಕದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಮಾತನಾಡಿದ ಅವರು, ಕರ್ನಾಟಕದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಹೆಸರನ್ನು ನಾಮಕರಣ ಮಾಡುತ್ತೇವೆ. ಮುಂದಿನ ಬಜೆಟ್‌ನಲ್ಲಿಯೇ ಈ ಬಗ್ಗೆ ಅಧಿಕೃತ ಘೋಷಣೆ ಮಾಡಲಾಗುವುದು. ಗಾಂಧೀಜಿ ಅವರನ್ನು ಆರ್‌ಎಸ್‌ಎಸ್‌ನ ಗೋಡ್ಸೆ ಕೊಂದರು. ಈಗ ಆರ್‌ಎಸ್‌ಎಸ್ ಪ್ರೋತ್ಸಾಹದಿಂದಲೇ ಮನರೇಗಾದಿಂದ ಗಾಂಧೀಜಿ ಹೆಸರನ್ನು ಎರಡನೇ ಬಾರಿಗೆ ಹತ್ಯೆ ಮಾಡಿದ್ದಾರೆ ಎಂದು ಟೀಕಿಸಿದರು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಶ್ರಮ ಸಂಸ್ಕೃತಿಯ ರೂಪದಂತಿರುವ ಮನರೇಗಾ ಯೋಜನೆ ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಕಾಯಿದೆ ತರಲು ನಾವು ಬಿಡುವುದಿಲ್ಲ. ಗಾಂಧೀಜಿ ಹೆಸರನ್ನು ಪಂಚಾಯತಿಗಳಿಗೆ ನಾಮಕರಣ ಮಾಡುತ್ತೇವೆ. ಇದು ಕಾಂಗ್ರೆಸ್ ಪಕ್ಷದ ತೀರ್ಮಾನ.

ಈ ಸಂಬಂಧ ಕೆಪಿಸಿಸಿ ಉಪಾಧ್ಯಕ್ಷರಾದ ಉಗ್ರಪ್ಪ ಹಾಗೂ ಕೆಪಿಸಿಸಿ ಪದಾಧಿಕಾರಿಗಳು ಪತ್ರ ಬರೆದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗಿದೆ. ಆ ಮೂಲಕ ಮಹಾತ್ಮ ಗಾಂಧಿ ಅವರ ಹೆಸರನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಕೆಲಸ ಮಾಡಲಾಗುವುದು. ಹಳ್ಳಿಗೊಂದು ಶಾಲೆ, ಸಹಕಾರ ಸಂಘ, ಪಂಚಾಯ್ತಿ ಇರಬೇಕು ಎಂಬುದು ಗಾಂಧೀಜಿ ಅವರ ಸಂಕಲ್ಪ ಎಂದು ತಿಳಿಸಿದರು.

ರಾಜೀವ್ ಗೌಡಗೆ ನ್ಯಾಯಾಂಗ ಬಂಧನ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಜಿ.ಅಮೃತಾಗೆ ಬೆದರಿಕೆಯೊಡ್ಡಿ ಬಂಧನಕ್ಕೊಳಗಾಗಿರುವ ರಾಜೀವ್ ಗೌಡರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸೋಮವಾರ ಅವರನ್ನು ಬಂಧಿಸಲಾಗಿತ್ತು. ಮಂಗಳವಾರ ಚಿಕ್ಕಬಳ್ಳಾಪುರ ನಗರದ ಪೊಲೀಸ್ ಸರ್ಕಿಟ್ ಹೌಸ್‌ನಲ್ಲಿ ವಿಚಾರಣೆ ನಡೆಸಿದ ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ್ದಾರೆ. ನಂತರ ಶಿಡ್ಲಘಟ್ಟ ಕೋರ್ಟಿಗೆ ಹಾಜರುಪಡಿಸಿದ್ದಾರೆ. ಅಲ್ಲಿ ನ್ಯಾಯಾಧೀಶರು ವಾದ ಪ್ರತಿವಾದ ಆಲಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೇರಳದ ಮಲ್ಲಪ್ಪುರಂ ಜಿಲ್ಲೆಯ ವಾಜಿಕಡವು ಹೋಟೆಲ್ ಸಮೀಪ ಕಾರಿನಲ್ಲಿದ್ದಾಗ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಆರೋಪಿಯ ಮೊಬೈಲ್ ಕರೆ, ವಾಹನಗಳ ಸಂಚಾರ, ಇತರ ಚಟುವಟಿಕೆಯ ಚಲನವಲನಗಳ ಆಧಾರದ ಮೇಲೆ ಮಾಹಿತಿಯನ್ನು ಕಲೆ ಹಾಕಿ, ಕಾರ್ಯಾಚರಣೆ ಕೈಗೊಳ್ಳಲಾಯಿತು.

ಕರ್ನಾಟಕ ಸೇರಿ ದೇಶದ 12 ಪ್ರಮುಖ ರಾಜ್ಯಗಳಿಗೆ ಭಾರೀ ಲಾಭ

9425 ವಸ್ತುಗಳಿಗೆ ಶೂನ್ಯ ಸುಂಕ ಇಲ್ಲವೇ ಭಾರೀ ತೆರಿಗೆ ಇಳಿಕೆ

ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅಂಕಿತ | ಉರಿದೆದ್ದ ಅಮೆರಿಕ

ಯೂರೋಪ್-ಭಾರತ ಚಾರಿತ್ರಿಕ ಒಪ್ಪಂದ

ದೆಹಲಿ: ಎಲ್ಲ ಒಪ್ಪಂದಗಳ ತಾಯಿ ಎಂದೇ ಬಣ್ಣಿಸಲಾಗಿದ್ದ ಭಾರತ ಮತ್ತು ಐರೋಪ್ಯ ಒಕ್ಕೂಟಗಳ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಮಂಗಳವಾರ ಸಹಿ ಹಾಕಲಾಗಿದೆ. ಭಾರತದ 77ನೇ ಗಣರಾಜ್ಯೋತ್ಸವಕ್ಕೆ ಅತಿಥಿಗಳಾಗಿ ಆಗಮಿಸಿರುವ ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್ ಮತ್ತು ಐರೋಪ್ಯ ಸಮಿತಿ ಅಧ್ಯಕ್ಷ ಆ್ಯಂಟೊನಿಯೋ ಕೋಸ್ಟಾ ಹಾಗೂ ಭಾರತದ ಪ್ರಧಾನಿ ಮೋದಿ ಒಪ್ಪಂದಕ್ಕೆ ಸಹಿ ಹಾಕಿದರು. ಈ ವರ್ಷಾಂತ್ಯದೊಳಗೆ ಎಲ್ಲ ಕಾನೂನು ಅಡೆತಡೆಗಳನ್ನು ದಾಟಿದ ನಂತರ ಇನ್ನೊಮ್ಮೆ ಒಪ್ಪಂದಕ್ಕೆ ಸಹಿ ಬೀಳಲಿದೆ. ಅಲ್ಲಿಂದ ಅಧಿಕೃತವಾಗಿ ಜಾರಿಯಾಗಲಿದೆ. ಮುಂದಿನ 7 ವರ್ಷಗಳಲ್ಲಿ ಈ ಒಪ್ಪಂದ ಜಾಗತಿಕ ಪರಿಣಾಮ ಗೊತ್ತಾಗಲಿದೆ. ಪ್ರಸ್ತುತ ಒಪ್ಪಂದದಿಂದ ಕರ್ನಾಟಕ ಸೇರಿ ಒಟ್ಟು ದೇಶದ 12 ರಾಜ್ಯಗಳಿಗೆ ಲಾಭವಾಗಲಿದೆ. ಒಟ್ಟು 9425 ವಸ್ತುಗಳಿಗೆ ಸುಂಕದಿಂದ ವಿನಾಯ್ತಿ ಸಿಗಲಿದೆ. ಪ್ರಸ್ತುತ ಭಾರತ ಯೂರೋಪ್‌ಗೆ 6.4 ಲಕ್ಷ ಕೋಟಿ ರು. ವಸ್ತುಗಳನ್ನು ರಫ್ತು ಮಾಡುತ್ತಿದೆ. → 9

ಐರೋಪ್ಯ ಒಕ್ಕೂಟದಲ್ಲಿ ಇಂಗ್ಲೆಂಡ್ ಇಲ್ಲ

ವಿಶೇಷ 27 ದೇಶಗಳ ಐರೋಪ್ಯ ಒಕ್ಕೂಟದಲ್ಲಿ ಇಂಗ್ಲೆಂಡ್ ಇಲ್ಲ. 2020, ಜ.31ರಂದು ಇಂಗ್ಲೆಂಡ್ ತಮ್ಮ ದೇಶದ ಜನರ ಅಭಿಪ್ರಾಯಗಳನ್ನಾಧರಿಸಿ ಒಕ್ಕೂಟದಿಂದ ಹೊರಬಿದ್ದಿದೆ.

ಒಪ್ಪಂದದ ವೇಳೆ ಪ್ರಧಾನಿ ಮೋದಿ, ಐರೋಪ್ಯ ಒಕ್ಕೂಟದ ನಾಯಕರಾದ ಕೋಸ್ಟಾ, ಉರ್ಸುಲಾ.

ಭಾರತಕ್ಕೇನು ಲಾಭ?

- ಭಾರತ ಶೇ.99 ಉತ್ಪನ್ನಗಳಿಗೆ ಯೂರೋಪ್ ಮಾರುಕಟ್ಟೆ ಮುಕ್ತ
- ಜವಳಿ, ಸಿದ್ಧ ಉಡುಪುಗಳು, ಚರ್ಮೋದ್ಯಮ, ಪಾದರಕ್ಷೆ, ಸಮುದ್ರೋತ್ಪನ್ನ, ರತ್ನ, ಆಭರಣ, ಕರಕುಶಲ ವಸ್ತು, ಎಂಜಿನಿಯರಿಂಗ್, ಆಟೋಮೊಬೈಲ್ ವಸ್ತುಗಳ ಮೇಲಿನ ತೆರಿಗೆ ಶೇ.10ರಿಂದ ಶೂನ್ಯಕ್ಕಿಳಿಯಲಿದೆ.
- ಎಂಜಿನಿಯರಿಂಗ್ ಹಾಗೂ ಅದರ ಸಲಕರಣೆ ಉದ್ಯಮಕ್ಕೆ 183 ಲಕ್ಷ ಕೋಟಿ ರು. ಮಾರುಕಟ್ಟೆಗೆ ನೇರಪ್ರವೇಶ
- ಯೂರೋಪ್‌ನ 7 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲಿವೆ ಭಾರತದ ರತ್ನ ಮತ್ತು ಆಭರಣಗಳು
- 9.1 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಭಾರತದ ಪಾದರಕ್ಷೆ ಉತ್ಪನ್ನಗಳ ಸ್ಪರ್ಧೆ
- 24 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಕಂಗೊಳಿಸಲಿವೆ ಭಾರತೀಯ ವಸ್ತ್ರಗಳು
- ಕೆಲಸಗಾರರು, ಕುಶಲಕರ್ಮಿಗಳು, ಮಹಿಳೆಯರು, ಯುವಕರು, ಸಣ್ಣ, ಅತಿ ಸಣ್ಣ ಉದ್ಯಮಿಗಳಿಗೆ ಅನುಕೂಲಕರ.

ಯೂರೋಪ್‌ಗೇನು ಲಾಭ?

- ಭಾರತಕ್ಕೆ ರಫ್ತು ಮಾಡುವುದರಿಂದ ಈಗಾಗಲೇ ಯೂರೋಪಿನಲ್ಲಿ 8 ಲಕ್ಷ ಉದ್ಯೋಗಾವಕಾಶ, ಮುಂದೆ ದುಪ್ಪಟ್ಟು
- ಐರೋಪ್ಯ ರಾಷ್ಟ್ರಗಳಿಂದ ದೊಡ್ಡ ಪ್ರಮಾಣದಲ್ಲಿ ಭಾರತದ ಸೇವಾ ವಲಯಕ್ಕೆ (ಆಸ್ಪತ್ರೆ, ಹೋಟೆಲ್, ಶಿಕ್ಷಣ ಇತ್ಯಾದಿ) ಪ್ರವೇಶ. ಆ ದೇಶಗಳ ಉತ್ಪನ್ನಗಳಿಗೆ ವರ್ಷಕ್ಕೆ 43.5 ಸಾವಿರ ಕೋಟಿ ರು. ತೆರಿಗೆ ವಿನಾಯ್ತಿ
- ಪ್ರತಿ ವರ್ಷ ಯೂರೋಪಿನ 2.50 ಲಕ್ಷ ವಾಹನಗಳು ಭಾರತದ ಮಾರುಕಟ್ಟೆಗೆ. ಈಗಿನ ಶೇ.110 ತೆರಿಗೆ ಶೇ.10ಕ್ಕಿಳಿಕೆ
- ಯೂರೋಪಿನ ಯಂತ್ರಗಳು, ವಿದ್ಯುನ್ಮಾನ, ವೈದ್ಯಕೀಯ ಸಾಧನಗಳು ತೆರಿಗೆ ಮುಕ್ತ. ಮುತ್ತು, ಹರಳುಗಳು, ಲೋಹಗಳಿಗೆ ತೆರಿಗೆ ಕಡಿತ. ರಾಸಾಯನಿಕಗಳಿಗೆ ಮುಂದೆ ಶೂನ್ಯ ತೆರಿಗೆ
- ಯೂರೋಪ್ ಕೃಷಿಕರಿಗೆ ಲಾಭ. ಅಲ್ಲಿನ ವೈನ್ ತೆರಿಗೆ ಶೇ.150ರಿಂದ ಶೇ.20, ಇತರೆ ಮದ್ಯಕ್ಕೆ ಶೇ.40ಕ್ಕಿಳಿಕೆ. ಆದರೆ ಭಾರತ ಅಕ್ಕಿ, ಸಕ್ಕರೆ, ದನದ ಮಾಂಸದ ಮೇಲಿನ ತೆರಿಗೆಯಿಳಿಸಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ಡಿಸಿಎಂ ತಲೆಗೆ ಟವೆಲ್ ಕಟ್ಟಿದ ಸಿಎಂ

ಕೇಂದ್ರದ ತೆರಿಗೆ ನಿಯಮದ ವಿರುದ್ಧ ವಾಗ್ದಾಳಿ ನಡೆಸಿದ ಶಾಸಕ ಪ್ರದೀಪ್ ಈಶ್ವರ್

ಬಡವರ ಹೊಟ್ಟೆ ತುಂಬಿಸಿದ ಸಿದ್ದರಾಮಯ್ಯ ನನ್ನ ಪಾಲಿನ ಶ್ರೀರಾಮ: ಮೆಚ್ಚುಗೆ

ಬಿಗ್‌ಬಾಸ್ ಗೆದ್ದದ್ದು ಗಿಲ್ಲಿಯಲ್ಲ, ನಿರ್ಮಲಾ!

ವಿಶ್ವವಾಣಿ ಸುದ್ದಿಮನೆ, ವಿಧಾನಸಭೆ

ಎಂಜಿನಿಯರ್, ವೈದ್ಯರು, ಶಿಕ್ಷಕರಾಗಲು ಕೋರ್ಸುಗಳುಂಟಯ್ಯ, ಬುದ್ಧ, ಬಸವ, ಅಂಬೇಡ್ಕರ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಆಗಲು ಕೋರ್ಸ್‌ಗಳು ಇಲ್ಲಯ್ಯ. ಅವರಂತಾಗಲು ನಿಮ್ಮೊಳಗಿನ ಫೋರ್ಸ್ ಬೇಕಯ್ಯ ಎಂದು ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಸದನದೊಳಗೆ ಹೇಳಿದ ಡೈಲಾಗ್‌ಗೆ ಆಡಳಿತ ಪಕ್ಷದ ಸದಸ್ಯರಿಂದ ಭರ್ಜರಿ ಚಪ್ಪಾಳೆ ಗಿಟ್ಟಿಸಿದ ಪ್ರಸಂಗ ನಡೆಯಿತು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವ ಅನುಮೋ ದಿಸಿ ಮಾತನಾಡಿದ ಪ್ರದೀಪ್ ಈಶ್ವರ್, ತಮ್ಮ ಈ ಭಾಷಣ ರಾಷ್ಟ್ರಗೀತೆ ಮತ್ತು ಕನ್ನಡಿಗರ ಆತ್ಮ ಗೌರವಕ್ಕೆ ಅಗೌರವ ತೋರಿದ ವ್ಯಕ್ತಿಗಳಿಗೆ ಅರ್ಪಣೆ ಎಂದರು. → 9

ರಾಜ್ಯಪಾಲರ ನಡೆ ಆತಂಕಕಾರಿ

ಸದನದಲ್ಲಿ ಮಾತನಾಡಿದ ಶಾಸಕ ಪೊನ್ನಣ್ಣ, ರಾಜ್ಯಪಾಲರು ಭಾಷಣ ಪೂರ್ಣ ಓದದಿರುವುದು ಆತಂಕಕಾರಿ ನಡೆ. ವಿರೋಧ ಪಕ್ಷಗಳು ಅಧಿಕಾರ ದಲ್ಲಿರುವ ರಾಜ್ಯಗಳ ರಾಜ್ಯಪಾಲರು ಕೇಂದ್ರದವರು ಹೇಳಿದಂತೆ ನಡೆಯುತ್ತಿರುವ ಆತಂಕವಿದೆ ಎಂದರು.

400 ಕೋಟಿ ರು. ದರೋಡೆಯಲ್ಲಿ ಬೆಳಗಾವಿ ಪೊಲೀಸರು ಭಾಗಿ?

ವಿನಾಯಕ ಮಠಪತಿ, ಬೆಳಗಾವಿ

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಬೆಳಗಾವಿಯ ಚೋರ್ಲಾ ಘಾಟ್‌ನಲ್ಲಿ ನಡೆದಿದೆ ಎನ್ನಲಾದ 400 ಕೋಟಿ ರು. ಹಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಸ್ಫೋಟಕ ಅಂಶ ಬೆಳಕಿಗೆ ಬಂದಿದೆ. ದರೋಡೆಯಲ್ಲಿ ಬೆಳಗಾವಿ ಪೊಲೀಸರ ಕೈವಾಡ ಇತ್ತಾ ಎಂಬ ಅನುಮಾನ ಹುಟ್ಟಿಕೊಂಡಿದೆ. ಸಂದೀಪ್ ಪಾಟೀಲ ಎಂಬ ವ್ಯಕ್ತಿಯ ಅಪಹ ರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳ ನಡುವಿನ ವಾಟ್ಸಪ್ ಸಂಭಾ ಷಣೆಯೇ ಆಡಿಯೋ ಬಹಿರಂಗವಾಗಿದ್ದು, ಸಂಶಯ ತೀವ್ರಗೊಂಡಿದೆ. → 9

- ಮಹಾ ಪೊಲೀಸರಿಂದ ಇನ್ನಿಬ್ಬರ ಬಂಧನ, ಬಂಧಿತರ ಸಂಭಾಷಣೆ ಲೀಕ್
- ವಾಟ್ಸಪ್ ಆಡಿಯೋದಲ್ಲಿ ಬೆಳಗಾವಿ ಪೊಲೀಸ್ ಪಾತ್ರದ ಬಗ್ಗೆ ಬೊಟ್ಟು

ಸಮಾಚಾರ ಸಣ್ಣದಲ್ಲ

ವಾಯುಭಾರ ಕುಸಿತ: ತೀವ್ರ ಚಳಿ, ಮಳೆ ಸಾಧ್ಯತೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ರಾಜ್ಯದಲ್ಲಿ ತೀವ್ರ ಚಳಿ ಹಾಗೂ ಹಲವು ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈಗಾಗಲೇ ನೆರೆಯ ತಮಿಳುನಾಡಿಗೆ ಭಾರಿ ಮಳೆ ಎಚ್ಚರಿಕೆ ನೀಡಿದ್ದ ಹವಾಮಾನ ಇಲಾಖೆ ಇದೀಗ ಅದರ ಪರಿಣಾಮ ಕರ್ನಾಟಕದ ಮೇಲೂ ಆಗಲಿದೆ ಎಂದು ಹೇಳಿದೆ. ರಾಜ್ಯದ ಹವಾಮಾನ ದಲ್ಲಿ ಪ್ರತಿದಿನವೂ ಏರುಪೇರು ಉಂಟಾಗುತ್ತಿದ್ದು, ಕಳೆದ ಕೆಲವು ದಿನಗಳಿಂದ ಚಳಿಯ ತೀವ್ರ ಕಡಿಮೆಯಾಗುತ್ತಿದೆ ಎನ್ನುವಾಗಲೇ ಮತ್ತೆ ರಾಜ್ಯದಲ್ಲಿ ಚಳಿ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದೆ. ಜತೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ.

ವಾಲ್ಮೀಕಿ ನಿಗಮದ ಮಾಜಿ ಎಂಡಿ ಪದ್ಮನಾಭ ಹೈ ಮೊರೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅಕೌಂಟೆಂಟ್ ಆಗಿದ್ದ ಪಿ.ಚಂದ್ರಶೇಖರ್ ಅವರ ಆತ್ಮಹತ್ಯೆ ಸಂಬಂಧ ದಾಖಲಾಗಿರುವ ಪ್ರಕರಣದಲ್ಲಿ ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿ ವಜಾಗೊಳಿಸಲು ಕೋರಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ .ಪದ್ಮನಾಭ ಸಲ್ಲಿಸಿರುವ ಅರ್ಜಿಯ ಕುರಿತು ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಸಿಐಡಿ ಪೊಲೀಸರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ನಿಷೇಧ ಕಾಯಿದೆ ಸೆಕ್ಷನ್ 3(2) ಮತ್ತು ಐಪಿಸಿ ಸೆಕ್ಷನ್ 306 ಹಾಗೂ 34ರ ಅಡಿ ಅಪರಾಧಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿ ವಜಾಗೊಳಿಸುವಂತೆ ಕೋರಿ ಪದ್ಮನಾಭ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

POONAWALLA FINCORP

ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ : ಯುನಿಟ್ ನಂ. 2401, 24ನೇ ಮಹಡಿ, ಅಲ್ಟಿಮಸ್, ಡಾ. ಜಿ ಎಂ ಭೋಸ್ಲೆ ಮಾರ್ಗ್, ವರ್ಲಿ, ಮುಂಬಯಿ 400 018 (ಮಹಾರಾಷ್ಟ್ರ)
ನೋಂದಾಯಿತ ಕಚೇರಿ: 201 ಮತ್ತು 202, 2ನೇ ಮಹಡಿ, ಎಪಿ81, ಕೋರೆಗಾಂನ್ ಪಾರ್ಕ್ ಅನೆಕ್ಸ್ ಮುಂದ್ವಾ, ಪುಣೆ 411 036 (ಮಹಾರಾಷ್ಟ್ರ)

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002 ರ ಅಡಿ ತಗಾದೆ ಸೂಚನೆ

ನೀವು, ಈ ಕೆಳಗೆ ಹೆಸರಿಸಿರುವ ಸಾಲಗಾರ/ಸಹ-ಸಾಲಗಾರರು ಗೃಹ ಸಾಲ/ಆಸ್ತಿ ಮೇಲೆ ಸಾಲವನ್ನು ನಿಮ್ಮ ಸ್ಥಿರಾಸ್ತಿ/ಗಳನ್ನು ಮ್ಯಾಗ್ನಾ ಫಿನ್‌ಕಾರ್ಪ್ ಲಿಮಿಟೆಡ್ ಎಮ್‌ಎಫ್‌ಎಲ್ ಎಂದು ಕರೆಯಲ್ಪಡುವ ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಗೆ ಅಡಮಾನ ಮಾಡಿ ಪಡೆದುಕೊಂಡಿರುತ್ತೀರಿ. ನೀವು ಮರುಪಾವತಿಸದೆ ಸುಸ್ತಿದಾರರಾಗಿರುವುದರಿಂದ, ನಿಮ್ಮ ಸಾಲ/ಗಳ ಖಾತೆಯನ್ನು ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸಲಾಗಿದೆ. ಸೆಕ್ಷನ್ 13(2) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ ಅಡಿ ತಗಾದೆ ಸೂಚನೆಯನ್ನು ನಮಗೆ ತಿಳಿದ ಇತ್ತೀಚಿನ ವಿಳಾಸಕ್ಕೆ ಕಳುಹಿಸಲಾಗಿದ್ದು, ಅದು ನಿಮ್ಮಿಂದ ಸ್ವೀಕೃತಿಯಾಗದೆ ಹಿಂತಿರುಗಿ ಬಂದಿರುತ್ತದೆ. ಆದುದರಿಂದ ಅದರ ವಿವರಗಳನ್ನು ಸೆಕ್ಷನ್ 13(2) ರ ಕಾಯಿದೆ ನಿಯಮ 3(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ನಿಮಗೆ ಬದಲಿ ಸೂಚನೆಯಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ.
ಸಾಲಗಾರರ, ಸಹ-ಸಾಲಗಾರರ, ಭದ್ರತೆಗಳು, ಬಾಕಿ ವಿವರಗಳು, ಸೆಕ್ಷನ್ 13(2) ರ ಅಡಿ ನೀಡಲಾದ ತಗಾದೆ ಸೂಚನೆ ಮತ್ತು ಕ್ಲೈಮು ಮಾಡಲಾದ ಮೊತ್ತದ ವಿವರಗಳು ಈ ಕೆಳಗಿನಂತಿದೆ.

ಕ್ರ. ಸಂ.	ಸಾಲಗಾರರ, ಸಹ-ಸಾಲಗಾರರ, ಜಾಮೀನುದಾರರ ಹೆಸರು ಮತ್ತು ಸಾಲದ ಮೊತ್ತ	ಭದ್ರತಾ ಸ್ವತ್ತಿನ ವಿವರ	ತಗಾದೆ ಸೂಚನೆ ದಿನಾಂಕ	ಬಾಕಿ ಮೊತ್ತ ರೂ.ಗಳಲ್ಲಿ
01.	ಸಾಲಗಾರರು, ಸಹ-ಸಾಲಗಾರರು: ಶ್ರೀನಿವಾಸ ವಿ ಮತ್ತು ಕಂಪನಿ, ಐಶ್ವರ್ಯ ಆರ್, ಶ್ರೀನಿವಾಸ ಎ ವಿ. ಸಾಲದ ಮೊತ್ತ : ರೂ. 1,35,00,000/- (ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳು ಮಾತ್ರ). ಸಾಲದ ಸಂಖ್ಯೆ: LAP0113100000010348435	ಆಸ್ತಿಯ ವೇಳಾಪಟ್ಟಿ: ಸೈಟ್ ಸಂಖ್ಯೆ 54: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ಸಂಖ್ಯೆ 54 ರ ಅಸೆಸ್‌ಮೆಂಟ್ ಖಾತಾ ಸಂಖ್ಯೆ 5437/5247/54 ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ ಅಳತೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (37+36.6)/2 ಅಡಿ, ಎಲ್ಲ ಒಟ್ಟು ವಿಸ್ತೀರ್ಣ 1103 ಚದರ ಅಡಿ, ಅತ್ತಿಬೆಲೆ ಗ್ರಾಮ ಮತ್ತು ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ತಾಲ್ಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು ಮತ್ತು ಚಕ್ಕುಬಂದಿ : ಪೂರ್ವ: ಸೈಟ್ ಸಂಖ್ಯೆ 55, ಪಶ್ಚಿಮ: ಸೈಟ್ ಸಂಖ್ಯೆ 53, ಉತ್ತರ: 25 ಅಡಿ ರಸ್ತೆ, ದಕ್ಷಿಣ: ಆಸ್ತಿ ಎ.ಎಲ್. ಶ್ರೀನಿವಾಸ್‌ಗೆ ಸೇರಿದೆ. ಸೈಟ್ ಸಂಖ್ಯೆ 55: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ಸಂಖ್ಯೆ 55 ವೌಲ್ಯಮಾಪನ ಸಂಖ್ಯೆ. 5438/5248/55 ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ (37+37.6)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ಎಲ್ಲಾ 1119 ಚದರ ಅಡಿಗಳು ಅತ್ತಿಬೆಲೆ ಗ್ರಾಮ ಮತ್ತು ಹೋಬಳಿ, ಆನೇಕಲ್ ತಾಲ್ಲೂಕು ಬೆಂಗಳೂರು ಜಿಲ್ಲೆ ಬೆಂಗಳೂರು, ಇಲ್ಲಿದ್ದು ಚಕ್ಕುಬಂದಿ : ಪೂರ್ವಕ್ಕೆ: ಸೈಟ್ ಸಂಖ್ಯೆ 56, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 54, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ : ಆಸ್ತಿ ಎ.ಎಲ್. ಶ್ರೀನಿವಾಸ್ ಅವರಿಗೆ ಸೇರಿದೆ.	31.12.2025	ರೂ.1,38,30,402/- (ಒಂದು ಕೋಟಿ ಮೂವತ್ತೆಂಟು ಲಕ್ಷ ಮೂವತ್ತು ಸಾವಿರದ ನಾನ್ನೂರ ಎರಡು ರೂಪಾಯಿಗಳು ಮಾತ್ರ) ಜೊತೆಗೆ 10.25% ಭವಿಷ್ಯದ ವಾರ್ಷಿಕ ಬಡ್ಡಿ 31.12.2025 ರಿಂದ ಹಣ ಸಂಪೂರ್ಣ ಪಾವತಿಯಾಗುವವರೆಗೆ.

ನೀವುಗಳಾದ ಸಾಲಗಾರ ಮತ್ತು ಸಹ-ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲೆ ತಿಳಿಸಿದ ತಗಾದೆ ಮೊತ್ತ ಹಾಗೂ ಮೇಲೆ ತಿಳಿಸಿದಂತೆ ನಂತರದ ಬಡ್ಡಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು, ತಪ್ಪಿದಲ್ಲಿ ಕೆಳಸಹಿದಾರರು ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಹೇಳಲಾದ ಭದ್ರತೆಗಳ ಮೇಲೆ ಜಾರಿ ಕಾಯಿದೆ ಅನ್ವಯ ಕ್ರಮ ಕೈಗೊಳ್ಳಲಿರುವರು. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಸೆಕ್ಷನ್ 13(13) ರ ಹೇಳಲಾದ ಕಾಯಿದೆಯಂತೆ ಮೇಲೆ ಹೇಳಲಾದ ಭದ್ರತೆಗಳನ್ನು ಮಾರಾಟ, ಭೋಗ್ಯ ಅಥವಾ ಇನ್ನಿತರೆ ರೂಪದಲ್ಲಿ ನಮ್ಮ ಅನುಮತಿ ಇಲ್ಲದೆ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 28.01.2026

ಅಧಿಕೃತ ಅಧಿಕಾರಿ
ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಪರವಾಗಿ

यूनियन बैंक ऑफ इंडिया Union Bank of India
भारत सरकार का उपक्रम A Government of India Undertaking

ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮೇನ್, ಚಂದ್ರ ಲೇಔಟ್ ಬಸ್ ನಿಲ್ದಾಣದ ಎದುರು, ಚಂದ್ರ ಲೇಔಟ್, ಬೆಂಗಳೂರು-560040. ಇ-ಮೇಲ್: arb.bengalurunorth@unionbankofindia.bank.in, ಮೊಬೈಲ್ ನಂ. 9825766633

ಇ-ಹರಾಜು ಮಾರಾಟದ ನೋಟೀಸ್

ಪ್ರೊವಿಜೋ ನಿಯಮ 8 & 9 ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟಕ್ಕೆ 15 ದಿನಗಳ ನೋಟೀಸ್

ಸಾರ್ವಜನಿಕವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರರಾದ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ. ಸೆಕ್ಯೂರ್ಡ್ ಕ್ರೆಡೀಟರ್ ಅಧಿಕೃತ ಅಧಿಕಾರಿಯವರಿಂದ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ. **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ,** ಸೆಕ್ಯೂರ್ಡ್ ಕ್ರೆಡೀಟರ್ ಇವರು ಬಾಕಿ ಮೊತ್ತ ಮತ್ತು ಜೊತೆಗೆ ಮುಂದಿನ ಬಡ್ಡಿ ಮತ್ತು ಕಾನೂನು / ಇತರ ವೆಚ್ಚಗಳೊಂದಿಗೆ ಬಾಕಿ ಮೊತ್ತದ ವಸೂಲಾತಿಗಾಗಿ ಅದನ್ನು **"ಎಲ್ಲಿ ಹೇಗಿದೆಯೋ ಹಾಗೆ" ಎಲ್ಲಿ ಏನಿದೆಯೋ ಹಾಗೆ"** ಮತ್ತು **ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ಹೇಳಿದಂತೆ ಬಾಕಿ ವಸೂಲಿಗಾಗಿ ಕೆಳಗೆ ತಿಳಿಸಿದ ದಿನಾಂಕದಂದು, ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಸಾಲಗಾರ ಮತ್ತು ಜಾಮೀನುದಾರರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚುಗಳು ಜೊತೆಗೆ ಕೆಳಗೆ ತಿಳಿಸಲಾದ ಬಾಕಿಗಳನ್ನು ಮರು ಪಡೆಯಲು ಮತ್ತು ಮುಂಗಡ ಠೇವಣಿಯನ್ನು ಕೆಳಕಂಡ ದಿನಾಂಕದಂದು ಆಸ್ತಿಯ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇಎಂಡಿ) ಸ್ಥಿರಾಸ್ತಿ ಇತ್ಯಾದಿಗಳನ್ನು ಕೆಳಗೆ ನೀಡಲಾಗಿದೆ.

1. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : (1) ಮೆ॥ ಸಿದ್ಧಾರ್ಥ ಎಂಟರ್‌ಪ್ರೈಸಸ್, ಮಾಲೀಕರು: ಎ.ಈಶ್ವರಿ, ನಂ. 122-49, 27ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082, **(2) ಶ್ರೀಮತಿ. ಎ.ಈಶ್ವರಿ** ಕೋಂ ಮೋಹನ್ ರಾಜ್, ನಂ. 122-49, 27ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082. ಜಾಮೀನುದಾರರು: **(3) ಶ್ರೀಮತಿ.ಕೆ ಶಶಿಕಲಾ,** # 53, 9 ನೇ ಕ್ರಾಸ್, 13 ನೇ ಮೇನ್, ಜೆ ಪಿ ನಗರ, ಬೆಂಗಳೂರು-560078.

ಬರಬೇಕಾದ ಬಾಕಿ ಮೊತ್ತ: ರೂ. 3,36,21,272.72 (ರೂಪಾಯಿ ಮೂರು ಕೋಟಿ ಮೂವತ್ತಾರು ಲಕ್ಷದ ಇಪ್ಪತ್ತೊಂದು ಸಾವಿರದ ಎರಡುನೂರ ಎಪ್ಪತ್ತೆರಡು ಮತ್ತು ಎಪ್ಪತ್ತೆರಡು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.10.2025 + ಭವಿಷ್ಯದ ಬಡ್ಡಿ + ಇತರ ವೆಚ್ಚಗಳು.

ಆಸ್ತಿಯ ವಿವರ : ಆಸ್ತಿ ನಂ.1 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮುಖ್ಯ ಷೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಮಧ್ಯ ಭಾಗದ ಕಟ್ಟಡದ ಪೂರ್ವ ಭಾಗವಾಗಿರುವ ಬ್ಲಾಕ್ 'ಸಿ' ನ ನೆಲ ಮಹಡಿಯನ್ನೊಳಗೊಂಡಂತೆ (ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 77 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 120 ಅಡಿ, ಕಟ್ಟಡದ ಮೂರು ಬ್ಲಾಕ್‌ಗಳನ್ನೊಳಗೊಂಡಿದ್ದು, ಅವುಗಳೆಂದರೆ 1) ಮುಖ್ಯ ಕಟ್ಟಡ 2) ಹಿಂಭಾಗದ ವಾಸಯೋಗ್ಯ ಕಟ್ಟಡ 3) ಮಧ್ಯದ ಕಟ್ಟಡ) ಕಟ್ಟಡದ ಬಿಲ್ಟ್ ಅಪ್ ಪ್ರದೇಶದ ಅಂದಾಜು ವಿಸ್ತೀರ್ಣ 700 ಚದರ ಅಡಿ, ಜೊತೆಗೆ 1/5 ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಂತೆ ಭೂಮಿಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 29 ಅಡಿ, ಉತ್ತರದಿಂದ ದಕ್ಷಿಣಕ್ಕೆ: 24 ಅಡಿ, ಈ ಆಸ್ತಿಯು ಮುಖ್ಯ ಕಟ್ಟಡದ ನಡುವೆ ಮತ್ತು ವಾಸಯೋಗ್ಯ ಭಾಗದ ಜೊತೆಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿದ್ದು, ಈ ಆಸ್ತಿಯು 122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ. ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದ್ದು, ಹೊಸ ಬಿಬಿಎಂಪಿ ಖಾತಾ ನಂ.122-49/7ರಲ್ಲಿದೆ. ಮಾಲೀಕರು: ಶ್ರೀಮತಿ ಈಶ್ವರಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 123 & 123 ಎ, ಪಶ್ಚಿಮಕ್ಕೆ: ಬ್ಲಾಕ್ ಡಿ ನ ಅದೇ ಆಸ್ತಿ, ಉತ್ತರಕ್ಕೆ: ಮುಖ್ಯ ಕಟ್ಟಡ, ದಕ್ಷಿಣಕ್ಕೆ: ಬ್ಲಾಕ್ ಎ ನ ಅದೇ ಆಸ್ತಿ.

ಆಸ್ತಿ ನಂ.2 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮಧ್ಯದ ಕಟ್ಟಡದಲ್ಲಿ ಎರಡನೇ ಮಹಡಿ, ಬ್ಲಾಕ್ 'ಸಿ' ನಲ್ಲಿರುವ ವಾಣಿಜ್ಯ ಭಾಗವು ಪೂರ್ವ ಭಾಗವಾಗಿದ್ದು ಮತ್ತು ಬ್ಲಾಕ್ ಡಿ ಪಶ್ಚಿಮ ಭಾಗವಾಗಿದ್ದು, ಮುಖ್ಯ ಕಟ್ಟಡ ಮತ್ತು ಹಿಂಭಾಗದ ವಸತಿ ಕಟ್ಟಡವು ಮುಖ್ಯ ಕಟ್ಟಡದ ನಡುವಿನ ಷೆಡ್ಯೂಲ್‌ನಲ್ಲಿದೆ. (ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 77 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 120 ಅಡಿ, ಕಟ್ಟಡದ ಮೂರು ಬ್ಲಾಕ್‌ಗಳನ್ನೊಳಗೊಂಡಿದ್ದು, ಅವುಗಳೆಂದರೆ 1) ಮುಖ್ಯ ಕಟ್ಟಡ 2) ಹಿಂಭಾಗದ ವಾಸಯೋಗ್ಯ ಕಟ್ಟಡ 3) ಮಧ್ಯದ ಕಟ್ಟಡ) ಕಟ್ಟಡದ ಬಿಲ್ಟ್ ಅಪ್ ಪ್ರದೇಶದ ಅಂದಾಜು ವಿಸ್ತೀರ್ಣ 1400 ಚದರ ಅಡಿ, ಜೊತೆಗೆ 1/5 ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಂತೆ ಭೂಮಿಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ, ಉತ್ತರದಿಂದ ದಕ್ಷಿಣಕ್ಕೆ: 24 ಅಡಿ, ಜೊತೆಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿದ್ದು, ಈ ಆಸ್ತಿಯು 122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ. ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದ್ದು, ಹೊಸ ಬಿಬಿಎಂಪಿ ಖಾತಾ ನಂ.122-49/11ರಲ್ಲಿದೆ. ಮಾಲೀಕರು: ಶ್ರೀಮತಿ ಈಶ್ವರಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 123 & 123 ಎ, ಪಶ್ಚಿಮಕ್ಕೆ: 10 ಅಡಿ ಪ್ಯಾಸೇಜ್, ಉತ್ತರಕ್ಕೆ: ಮುಖ್ಯ ಕಟ್ಟಡ, ದಕ್ಷಿಣಕ್ಕೆ: ಬ್ಲಾಕ್ ಎ & ಬಿ ನ ಅದೇ ಆಸ್ತಿ.

ಆಸ್ತಿ ನಂ.3: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನೆಲಮಹಡಿ, ಬ್ಲಾಕ್ 'ಎ' ನಲ್ಲಿರುವ ವಸತಿ ಭಾಗವು ಮುಖ್ಯ ಷೆಡ್ಯೂಲ್‌ನ ಹಿಂಭಾಗದ ವಸತಿ ಕಟ್ಟಡದ ಪೂರ್ವ ಭಾಗವಾಗಿದೆ. (ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 77 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 120 ಅಡಿ, ಕಟ್ಟಡದ ಮೂರು ಬ್ಲಾಕ್‌ಗಳನ್ನೊಳಗೊಂಡಿದ್ದು, ಅವುಗಳೆಂದರೆ 1) ಮುಖ್ಯ ಕಟ್ಟಡ 2) ಹಿಂಭಾಗದ ವಾಸಯೋಗ್ಯ ಕಟ್ಟಡ 3) ಮಧ್ಯದ ಕಟ್ಟಡ) ಕಟ್ಟಡದ ಬಿಲ್ಟ್ ಅಪ್ ಪ್ರದೇಶದ ಅಂದಾಜು ವಿಸ್ತೀರ್ಣ 1300 ಚದರ ಅಡಿ, ಜೊತೆಗೆ 1/5 ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಂತೆ ಭೂಮಿಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 38.6 ಅಡಿ, ಉತ್ತರದಿಂದ ದಕ್ಷಿಣಕ್ಕೆ: 32 ಅಡಿ ಬ್ಲಾಕ್ 'ಎ' ನಲ್ಲಿ ಒಳಗೊಂಡಿದೆ, ಜೊತೆಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿದ್ದು, ಈ ಆಸ್ತಿಯು 122/49, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560082ರಲ್ಲಿದೆ. ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದ್ದು, ಹೊಸ ಬಿಬಿಎಂಪಿ ಖಾತಾ ನಂ.122-49/11ರಲ್ಲಿದೆ. ಮಾಲೀಕರು: ಶ್ರೀಮತಿ ಈಶ್ವರಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 123 & 123 ಎ, ಪಶ್ಚಿಮಕ್ಕೆ: ಬ್ಲಾಕ್ ಬಿ ನ ಅದೇ ಆಸ್ತಿ, ಉತ್ತರಕ್ಕೆ: ಬ್ಲಾಕ್ ಸಿ ನ ಅದೇ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ.113.

ಆಸ್ತಿ ನಂ.4: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮೊದಲನೇ ಮಹಡಿ, ಮುನಿಸಿಪಲ್ ಭಾಗದ ನಂ.122/49-9, ಬಿಬಿಎಂಪಿ ಪಿಐಡಿ ನಂ.59-85-49/9 ಮಧ್ಯ ಕಟ್ಟಡದ ಬ್ಲಾಕ್ 'ಡಿ' ಪಶ್ಚಿಮ ಭಾಗದಲ್ಲಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 24 ಅಡಿ, ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 720 ಚದರ ಅಡಿ ಬಾಕ್ 'ಡಿ' ಆಸ್ತಿ ನಂ.122/49-9, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು-560070ರಲ್ಲಿದೆ. ಜೊತೆಗೆ 1/5 ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಿದೆ. ಮಾಲೀಕರು: ಶ್ರೀಮತಿ ಈಶ್ವರಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಬಾಲ್ಕನಿ & ನಿವೇಶನ ನಂ.123 & 123ಎ, ಪಶ್ಚಿಮಕ್ಕೆ: ಬ್ಲಾಕ್ ಸಿ ಯಲ್ಲಿರುವ ಎಂ.ಎಸ್ ವಾಸುದೇವರವರ ಭಾಗ, ಉತ್ತರಕ್ಕೆ: ಮುಖ್ಯ ಕಟ್ಟಡ ಮತ್ತು 27ನೇ ಕ್ರಾಸ್ ರಸ್ತೆ, ದಕ್ಷಿಣಕ್ಕೆ: ಬ್ಲಾಕ್ 'ಬಿ' ಯಲ್ಲಿರುವ ಎಂ ಎಸ್ ಗಿರೀಜರವರ ಭಾಗ.

ಮೀಸಲು ಬೆಲೆ		ಇಎಂಡಿ ಮೊತ್ತ	ಬಿಡ್ ಗುಣಕ
ಆಸ್ತಿ ನಂ.1 :	ರೂ.23,00,000/-	ರೂ. 2,30,000/-	ರೂ.50,000/-
ಆಸ್ತಿ ನಂ. 2 :	ರೂ.41,00,000/-	ರೂ. 4,10,000/-	ರೂ. 50,000/-
ಆಸ್ತಿ ನಂ. 3 :	ರೂ.41,00,000/-	ರೂ. 4,10,000/-	ರೂ. 50,000/-
ಆಸ್ತಿ ನಂ.4 :	ರೂ.21,00,000/-	ರೂ. 2,10,000/-	ರೂ. 50,000/-

ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ.

ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಇಲ್ಲ.

ಆಸ್ತಿ/ಆಸ್ತಿಗಳ ಮೊದಲ ಬಿಡ್ ಮೀಸಲು ಬೆಲೆ ಮತ್ತು ಒಂದು ಬಿಡ್ ಗುಣಾಂಕ ಯಾವಾಗಲೂ ಹೆಚ್ಚಳವಾಗಿರುತ್ತದೆ. ಈ ಮೊತ್ತವು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕನಿಷ್ಠ ಬಿಡ್ ಮೊತ್ತವಾಗಿರುತ್ತದೆ.

ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಆದಾಗ್ಯೂ, ಉದ್ದೇಶಿತ ಬಿಡ್‌ದಾರರ ಋಣಭಾರಗಳು, ಆಸ್ತಿಯ ವಿರುದ್ಧ ಬಾಕಿ ಇರುವ ಯಾವುದೇ ನ್ಯಾಯಾಲಯದ ಪ್ರಕರಣಗಳು, ಹರಾಜಿಗೆ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು/ ಬಾಕಿಗಳು, ಉದಾಹರಣೆಗೆ ವಿದ್ಯುತ್ ಬಿಲ್, ನೀರಿನ ಬಿಲ್, ಬಾಕಿ ಇರುವ ಸಿಎಎಂ ಶುಲ್ಕಗಳು, ಸಂಘಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಶುಲ್ಕಗಳು, ಖಾತಾ ವರ್ಗಾವಣೆ ಮತ್ತು ಆಸ್ತಿ ತೆರಿಗೆ ಇತ್ಯಾದಿಗಳ ಬಗ್ಗೆ ತಮ್ಮ ಬಿಡ್ ಸಲ್ಲಿಸುವ ಮೊದಲು ತಮ್ಮದೇ ಆದ ಸ್ವತಂತ್ರ ವಿಚಾರಣೆಯನ್ನು ನಡೆಸಬೇಕು. ಮಾರಾಟ ದೃಢಪಡಿಸಿದ ನಂತರ/ಹರಾಜು ಮುಕ್ತಾಯಗೊಂಡ ನಂತರ, ಹೆಚ್1 ಬಿಡ್ಡರ್‌ಗಳು ಪಾವತಿಸಿದ ಮಾರಾಟ ಬೆಲೆಯ ಮಾರಾಟವನ್ನು ರದ್ದುಗೊಳಿಸಲು / ಮರುಪಾವತಿ ಮಾಡಲು ಯಾವುದೇ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ.
ಯಶಸ್ವಿ ಬಿಡ್ದಾರನು ಇ - ಖಾತಾ ಮತ್ತು ನಂತರದ ಮಾರಾಟ ಪ್ರಮಾಣಪತ್ರದ ನೋಂದಣಿಯನ್ನು ಪಡೆಯಲು ತನ್ನದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಖಾತೆಯನ್ನು ಹೊಂದಿರುವ ಸಂಖ್ಯೆ 800001980050000 A/C ಹೆಸರು : Inward RTGS IFSC ಕೋಡ್: UBIN0580007

ಹರಾಜಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ eauctionhelpdesk@unionbankofindia.bank ಅಥವಾ arb.bengalurunorth@unionbankofindia.bank ಗೆ ಇಮೇಲ್ ಮಾಡಿ ಅಥವಾ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಅಸೆಟ್ ರಿಕವರಿ ಶಾಖೆ, ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮುಖ್ಯ ರಸ್ತೆ, ಚಂದ್ರ ಲೇಔಟ್ ಬಸ್ ನಿಲ್ದಾಣದ ಎದುರು, ಚಂದ್ರ ಲೇಔಟ್, ಬೆಂಗಳೂರು-560040 ಅನ್ನು ಸಂಪರ್ಕಿಸಿ. ಮುಖ್ಯ ವ್ಯವಸ್ಥಾಪಕ ಶ್ರೀ ಸಿರಿಲ್ ಮೊಂತೆರೊ ಸಂಪರ್ಕ ಸಂಖ್ಯೆ 9825766633.

ಇ-ಹರಾಜಿನ ದಿನಾಂಕ ಮತ್ತು ಸಮಯ: ದಿನಾಂಕ : 13.02.2026 (ಶುಕ್ರವಾರ) ರಂದು ಮಧ್ಯಾಹ್ನ 12.00 ರಿಂದ ಸಂಜೆ 5.00 ಗಂಟೆಯವರೆಗೆ (10 ನಿಮಿಷ ಅನಿಯಮಿತ ಸ್ವಯಂ ವಿಸ್ತರಣೆಗಳೊಂದಿಗೆ)
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : ಇ-ಹರಾಜು ಪ್ರಾರಂಭವಾಗುವ ಮುನ್ನ ಅಥವಾ ಮೊದಲು

ಗಮನಿಸಿ: (1) ಉದ್ದೇಶಿತ ಖರೀದಿದಾರರು https://baanknet.com (Buyer Registration – link provided in the home page of the website) ಮೂಲಕ ನೋಂದಾಯಿಸಿಕೊಳ್ಳಬೇಕು.
ಇಎಂಡಿ ಮೊತ್ತವನ್ನು (10%) https://baanknet.com ಮೂಲಕ ಪಾವತಿಸಬೇಕು ಮತ್ತು ಬಾಕಿ ಮೊತ್ತ ಮಾರಾಟದ ಸೂಚನೆಯಲ್ಲಿ ನಮೂದಿಸಲಾದ ಖಾತೆ ಸಂಖ್ಯೆಯ ಮೂಲಕ ಮಾರಾಟದ ಬೆಲೆಯನ್ನು ಪಾವತಿಸಬೇಕು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಕೆಳಗೆ ತಿಳಿಸಿದ ಬ್ಯಾಂಕ್‌ಗಳ ವೆಬ್‌ಸೈಟ್‌ನಂತೆ ಒದಗಿಸಲಾದ ಲಿಂಕ್ ಅನ್ನು ನೋಡಿ ಮತ್ತು ಇ-ಹರಾಜು ಏಜೆಂಟ್ ವೆಬ್‌ಸೈಟ್. ಡಿಜಿಟಲ್ ಸಹಿ ಕಡ್ಡಾಯವಲ್ಲ.

ದಿನಾಂಕ: 27.01.2026
ಸ್ಥಳ : ಬೆಂಗಳೂರು

www.unionbankofindia.co.in | https://baanknet.com

ಸಹಿ/- ಅಧಿಕೃತ ಅಧಿಕಾರಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಗರ್ಭಕಂಠ ಕ್ಯಾನ್ಸರ್ ಜಾಗೃತಿ ಮಾಸ | ಆರೋಗ್ಯ ಅಭಿಯಾನದಿಂದ ರಾಜ್ಯದಲ್ಲಿ ಜನಜಾಗೃತಿ

ರಾಜ್ಯದಲ್ಲಿ ಗರ್ಭಕಂಠ ಕ್ಯಾನ್ಸರ್ ಇಳಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಕ್ಯಾನ್ಸರ್ ಜಾಗೃತಿ ಅಭಿಯಾನದಿಂದಾಗಿ ಗರ್ಭಕಂಠ ಕ್ಯಾನ್ಸರ್ ಇಳಿಕೆಯಾಗಿರುವುದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಅಂಕಿ ಅಂಶಗಳು ತಿಳಿಸಿವೆ.

ನಿಯಮಿತ ತಪಾಸಣೆ, ಆರಂಭಿಕ ಹಂತದಲ್ಲೆ ರೋಗ ಪತ್ತೆ ಸೇರಿ ವಿವಿಧ ಕ್ರಮಗಳಿಂದಾಗಿ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಶೇ.16 ರಷ್ಟಿದೆ. ರಾಜ್ಯದಲ್ಲಿ ಕಳೆದ ವರ್ಷ 89,165 ಸಕ್ರಿಯ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗಿವೆ. ಅವುಗಳಲ್ಲಿ 4,476 ಪ್ರಕರಣಗಳು (ಶೇ.9 ರಷ್ಟು) ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳಾಗಿವೆ. ಬೆಂಗಳೂರಿನಲ್ಲಿ 776 ಪ್ರಕರಣಗಳು ವರದಿಯಾಗಿವೆ. ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ 1980ರಲ್ಲಿ ಮಹಿಳೆಯರಲ್ಲಿ ವರದಿಯಾದ ಕ್ಯಾನ್ಸರ್ ಪ್ರಕರಣಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಶೇ.40 ರಷ್ಟು ಇತ್ತು. ಇತ್ತೀಚಿನ ವರ್ಷಗಳಲ್ಲಿ ಆ ಪ್ರಮಾಣ ಇಳಿಮುಖವಾಗಿದೆ. ಕಳೆದ ವರ್ಷ 16.2 ರಷ್ಟು ಇತ್ತು.

ಗರ್ಭಕಂಠದ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ, ಕೆಸಿಎಂಎಂಆರ್ ಇಂತಹ ವಿವಿಧ ಯೋಜನೆಗಳೊಂದಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ನಮ್ಮ ಸಂಸ್ಥೆಯ ವತಿಯಿಂದ ವಾರ್ಷಿಕವಾಗಿ 50-+100 ಸ್ಕ್ರೀನಿಂಗ್ ಮತ್ತು ಜಾಗೃತಿ ಶಿಬಿರಗಳನ್ನು ನಡೆಸುತ್ತದೆ. ಸಂಸ್ಥೆಯು ಸಮುದಾಯ ಸಂಪರ್ಕ, ಆರೋಗ್ಯ ಕಾರ್ಯಕರ್ತರ ತರಬೇತಿ, ಸಾರ್ವಜನಿಕ ಉಪನ್ಯಾಸಗಳು, ವಾಕಥಾನ್‌ಗಳು ಮತ್ತು ಜಾಗೃತಿ ಅಭಿಯಾನ ನಡೆಸುತ್ತಿದೆ. ಗರ್ಭಕಂಠದ ಕ್ಯಾನ್ಸರ್ ಆರಂಭಿಕ ಹಂತದಲ್ಲಿ ಪತ್ತೆ ಮಾಡಿ ಸಕಾಲಿಕ ಚಿಕಿತ್ಸೆ ನೀಡಿದರೆ ಗುಣಪಡಿಸಬಹುದಾಗಿದೆ. ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿಯಾಗಲಿದೆ. ಮಹಿಳೆಯರು ನಿಯಮಿತ ತಪಾಸಣೆಗೆ ಒಳಗಾಗಬೇಕು ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದ್ದಾರೆ. ಗರ್ಭಕಂಠದ ಕ್ಯಾನ್ಸರ್ ನಿಯಂತ್ರಣದಲ್ಲಿ ಕಿದ್ವಾಯಿ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಕ್ಯಾನ್ಸರ್‌ನಿಂದ ಗೆದ್ದವರ ಸ್ಫೂರ್ತಿದಾಯಕ ಮಾಹಿತಿ ಹಾಗೂ ಚಿಕಿತ್ಸೆ ಪಡೆಯುತ್ತಿರುವವರಿಗೆ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಕ್ಯಾನ್ಸರ್ ಗೆದ್ದವರ ದಿನ ಆಚರಿಸಲಾಗುತ್ತಿದೆ. ಗರ್ಭಕಂಠದ ಕ್ಯಾನ್ಸರ್ ತಪಾಸಣೆ ಮಾಡಲಾಗುತ್ತದೆ ಎಂದು ಸಂಸ್ಥೆಯ ಸ್ತ್ರೀ ಗಂಥಿಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಶೋಭಾ ತಿಳಿಸಿದ್ದಾರೆ.

ಗರ್ಭಕಂಠ ಕ್ಯಾನ್ಸರ್ ಉಚಿತ ತಪಾಸಣೆ ಇಂದು

ಗರ್ಭಕಂಠ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಕ್ಯಾನ್ಸರ್‌ನಿಂದ ಬಳಲುತ್ತಿರುವವರಲ್ಲಿ ಆತ್ಮವಿಶ್ವಾಸ ಹಾಗೂ ಚಿಕಿತ್ಸೆ ಪಡೆಯುತ್ತಿರುವವರನ್ನು ಪ್ರೇರೇಪಿಸುವ ಉದ್ದೇಶದಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕ್ಯಾನ್ಸರ್ ಗೆದ್ದವರ ದಿನ ಹಮ್ಮಿಕೊಂಡಿದೆ. ಕಿದ್ವಾಯಿ ಸಂಸ್ಥೆಯ ರೇಡಿಯೇಷನ್ ಆಂಕಾಲಜಿ, ಸ್ತ್ರೀ ಗಂಥಿಶಾಸ್ತ್ರ ವಿಭಾಗದ ಸಹಯೋಗದಲ್ಲಿ ಜ.28 ರಂದು ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಇನ್ಫೋಸಿಸ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಕ್ಯಾನ್ಸರ್‌ನಿಂದ ಗೆದ್ದವರು ಮನದಾಳದ ಮಾತುಗಳ ನ್ನಾಡಲಿದ್ದಾರೆ. ಸಂಸ್ಥೆಯಲ್ಲಿ ಗರ್ಭಕಂಠದ ಕ್ಯಾನ್ಸರ್ ಉಚಿತ ತಪಾಸಣೆ ನಡೆಯಲಿದೆ. ಸಮುದಾಯ ಕ್ಯಾನ್ಸರ್ ಘಟಕದಿಂದ ಕ್ಯಾನ್ಸರ್ ಸ್ಕ್ರೀನಿಂಗ್ ನಡೆಯಲಿದೆ.

ಸರಕಾರವು ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಮತ್ತು ಪ್ರಾದೇಶಿಕ ಕ್ಯಾನ್ಸರ್ ಕೇಂದ್ರಗಳ ಮೂಲಕ ತಪಾಸಣೆ, ಚಿಕಿತ್ಸಾ ಸೇವೆಗಳನ್ನು ಹೆಚ್ಚಿಸಿದೆ. ರಾಜ್ಯಾದ್ಯಂತ ಗರ್ಭಕಂಠದ ಕ್ಯಾನ್ಸರ್ ನಿಯಂತ್ರಣಕ್ಕಾಗಿ ಜಾಗೃತಿ ಮೂಡಿಸಲಾಗುತ್ತಿದೆ. ರಾಜ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ನಮ್ಮ ಸಂಸ್ಥೆ ಶ್ರಮಿಸುತ್ತಿದೆ.
-ಡಾ.ಟಿ.ನವೀನ್,
ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಕೌಟುಂಬಿಕ ಕಲಹ ನಟಿ ಪತಿಗೆ ಇರಿತ

ಬೆಂಗಳೂರು: ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ ಕಾವ್ಯಾಗೌಡ- ಸೋಮಶೇಖರ್ ದಂಪತಿ ಹಾಗೂ ಪ್ರೇಮಾ-ನಂದೀಶ್ ದಂಪತಿ ರಾಮಮೂರ್ತಿನಗರ ಪೊಲೀಸ್ ಠಾಣೆಯ ಪೊಲೀಸರಿಗೆ ದೂರು-ಪ್ರತಿದೂರು ನೀಡಿದ್ದು, ಒಟ್ಟು ಎಂಟು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಹಲ್ಲೆ, ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸೋಮಶೇಖರ್ ಹಾಗೂ ನಂದೀಶ್ ಅವರು ಸಹೋದರರು. ತಂದೆ ಹಾಗೂ ತಾಯಿಯೊಂದಿಗೆ ಒಂದೇ ಮನೆಯಲ್ಲಿ ಅವರು ವಾಸ ಮಾಡುತ್ತಿದ್ದಾರೆ. ಸಹೋದರರು ಹಾಗೂ ಅವರ ಪತ್ನಿಯ ನಡುವೆ ಗಲಾಟೆ ನಡೆದು ಠಾಣೆಯ ಮೆಟ್ಟಿಲೇರಲಾಗಿದೆ. ನಟಿ ಕಾವ್ಯಾಗೌಡ ಅವರ ಮೇಲೆ ಹಲ್ಲೆ ನಡೆಸಿದ್ದು, ಆಕೆಯ ಪತಿ ಸೋಮಶೇಖರ್ ಅವರಿಗೂ ಚಾಕುವಿನಿಂದ ಇರಿಯಲಾಗಿದೆ ಎಂದು ಕಾವ್ಯಾ ಅವರ ಸಹೋದರಿ ಭವ್ಯ ಗೌಡ ಅವರು ದೂರು ನೀಡಿದ್ದಾರೆ. ನಮ್ಮ ಮೇಲೂ ಹಲ್ಲೆ ನಡೆಸಿ ಮಾಂಗಲ್ಯ ಸರ ಕಸಿದುಕೊಳ್ಳಲಾಗಿತ್ತು ಎಂದು ಪ್ರೇಮಾ ಅವರು ದೂರು ನೀಡಿದ್ದಾರೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸಿಬ್ಬಂದಿ ಜ.29ಕ್ಕೆ ಬೆಂಗಳೂರು ಚಲೋ

ಮುಷ್ಕರದಲ್ಲಿ ಭಾಗಿಯಾದರೆ ಸಂಬಳ ಕಡಿತ ಆದೇಶ

ಬೆಂಗಳೂರು: ವೇತನ ಪರಿಷ್ಕರಣೆ ಮತ್ತು ವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಜ.29ರಂದು ಘೋಷಿಸಲಾಗಿದ್ದ ಬೆಂಗಳೂರು ಚಲೋ ಮುಷ್ಕರ ಕೈಗೊಂಡರೆ ಕ್ರಮ ಕೈಗೊಳ್ಳಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಕೆಎಸ್‌ಆರ್‌ಟಿಸಿ ಸೇರಿದಂತೆ ಕರ್ನಾಟಕದ ನಾಲ್ಕು ಸರಕಾರಿ ಸಾರಿಗೆ ನಿಗಮಗಳ ನೌಕರರು ಸರಕಾರದ ವಿರುದ್ಧ ಸಮರ ಸಾರಿದ್ದು, ವೇತನ ಮತ್ತು ವೇತನ ಪರಿಷ್ಕರಣೆಗೆ ಸಂಬಂಧಿಸಿದ ದೀರ್ಘಕಾಲದಿಂದ ಬಾಕಿಯಿರುವ ಬೇಡಿಕೆಗಳನ್ನು ಈಡೇರಿಸುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದು ಆರೋಪಿಸಿ ನಾಡಿದ್ದು ಅಂದರೆ ಜನವರಿ 29ರಂದು ಬೆಂಗಳೂರು ಚಲೋಗೆ ಕರೆ ನೀಡಿದ್ದಾರೆ. ಆದರೆ ಇದಕ್ಕೆ ಕೆಎಸ್‌ಆರ್‌ಟಿಸಿ ಬಿಸಿ ಮುಟ್ಟಿಸಿದ್ದು, ಸಾರಿಗೆ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ. ಮುಷ್ಕರಕ್ಕೆ ಬೆಂಬಲವನ್ನು ಸೂಚಿಸುವಂತಿಲ್ಲ. ಗುರುವಾರ ಕರ್ತವ್ಯಕ್ಕೆ ಹಾಜಾರಾಗದಿದ್ದರೆ ನೋ ವರ್ಕ್ ನೋ ಪೇ ಕ್ರಮ ಕೈಗೊಳ್ಳಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಆದೇಶ ಹೊರಡಿಸಿದ್ದಾರೆ.

ನೋ ವರ್ಕ್ ನೋ ಪೇ ಆದೇಶ: ಸಾರಿಗೆ ನೌಕರರು ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಜನವರಿ 29ರಂದು ಬೆಂಗಳೂರು ಚಲೋ ಕೈಗೊಂಡಿದ್ದು, ಇದಕ್ಕೆ ಒಂದು ದಿನ ಮೊದಲೇ ಕೆಎಸ್‌ಆರ್‌ಟಿಸಿ ಮಹತ್ವದ ಆದೇಶ ಹೊರಡಿಸಿದೆ. ಸಾರಿಗೆ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ, ಮುಷ್ಕರಕ್ಕೆ ಬೆಂಬಲವನ್ನು ಸೂಚಿಸುವಂತಿಲ್ಲ ಎಂದು ಎಚ್ಚರಿಕೆ ಸಂದೇಶ ರವಾನಿಸಿದೆ. ಒಂದು ವೇಳೆ ಗುರುವಾರ ಕರ್ತವ್ಯಕ್ಕೆ ಹಾಜಾರಾಗಿಲ್ಲ ಎಂದಾದರೆ ನೋ ವರ್ಕ್ ನೋ ಪೇ ಎನ್ನುವ ಆದೇಶವನ್ನು ಜಾರಿ ಮಾಡಿದೆ. 01-01-2020ರಿಂದ 28-02- 2023ರ ವರೆಗಿನ 38 ತಿಂಗಳ ವೇತನ ಪರಿಷ್ಕರಣೆಯ ಹಿಂಬಾಕಿ ಹಾಗೂ 01.01.2024 ರಿಂದ ನಾಲ್ಕು ವರ್ಷಗಳ ವೇತನ ಒಪ್ಪಂದಕ್ಕೆ ಆಗ್ರಹಿಸಿ ಜಂಟಿ ಕ್ರಿಯಾ ಸಮಿತಿಯು ಜನವರಿ 29ರ ಗುರುವಾರ ಬೆಂಗಳೂರು ಚಲೋಗೆ ಕರೆ ನೀಡಿದೆ. ಈ ಹಿನ್ನೆಲೆ ಪ್ರಯಾಣಿಕರಿಗೆ ಯಾವುದೇ ಸಮಸ್ಯೆ ಆಗದಂತೆ ಮುಂಜಾಗ್ರತಾ ಕೈಗೊಳ್ಳುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜ.29ರಂದು ಬಸ್ ಸಂಚಾರ ಇರುತ್ತದಾ ಇಲ್ಲವಾ?: ಇದರೊಂದಿಗೆ ಕೆಎಸ್‌ಆರ್‌ಟಿಸಿ ತನ್ನ ನೌಕರರ ಪ್ರತಿಭಟನೆಯನ್ನು ನಿಯಂತ್ರಿಸಲು ಮುಂದಾಗಿದ್ದು, ಬೆಂಗಳೂರು ಚಲೋ, ಸಾರಿಗೆ ನೌಕರರ ಮುಂದಿನ ನಡೆ ಮೇಲೆ ನಿಂತಿದೆ. ಒಂದು ವೇಳೆ ಈ ಆದೇಶಕ್ಕೆ ಹೆದರಿ ಪ್ರತಿಭಟನೆಯಿಂದ ಹಿಂದೆ ಸರಿದರೆ ಎಂದಿನಂತೆ ಬಸ್ ಸಂಚಾರ ಇರಲಿದೆ. ಇನ್ನು ಆದೇಶಕ್ಕೆ ನಿರ್ಲಕ್ಷ್ಯ ವಹಿಸಿ ಬೆಂಗಳೂರು ಚಲೋಗೆ ತೆರಳಿದರೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ ಎನ್ನುವ ಮಾಹಿತಿ ಲಭ್ಯವಾಗಿದೆ.

wework INDIA

WeWork India Management Limited
CIN: L74999KA2016PLC093227

EXTRACT OF UNAUDITED STANDALONE AND CONSOLIDATED FINANCIAL RESULTS FOR THE QUARTER AND NINE MONTHS ENDED DECEMBER 31, 2025

(Rs. in Million, unless specified)

Sl. No	Particulars	Standalone			Consolidated		
		Quarter ended 31/12/2025	Nine months ended 31/12/2025	Quarter ended 31/12/2024	Quarter ended 31/12/2025	Nine months ended 31/12/2025	Quarter ended 31/12/2024
		(Unaudited)	(Unaudited)	(Unaudited)	(Unaudited)	(Unaudited)	(Unaudited)
1	Total Income from Operations	6319.33	17389.17	4900.56	6341.05	17441.17	4916.58
2	Net profit/(loss) for the period (before tax, exceptional and/or extraordinary items#)	193.58	121.37	(377.19)	192.78	120.38	(369.28)
3	Net profit/(loss) for the period before tax (after exceptional and/or extraordinary items#)	150.64	78.43	(836.25)	167.50	88.91	(830.31)
4	Net profit/(loss) for the period after tax (after exceptional and/or extraordinary items#)	150.64	78.43	(836.25)	167.89	90.48	(831.19)
5	Total Comprehensive Income for the period [Comprising profit/(loss) for the period (after tax) and other comprehensive income (after tax)]	147.93	72.30	(841.38)	164.81	83.66	(836.30)
6	Equity Share Capital (Face value of Rs. 10 each)	1,340.23	1,340.23	904.30	1,340.23	1,340.23	904.30
7	Reserves (excluding Revaluation Reserve) as per the Audited Balance Sheet of the previous year	-	-	-	-	-	-
8	Earnings Per Share (of Rs.10/- each) 1. Basic (amount in Rs.)	1.13	0.59	(6.61)	1.25	0.67	(6.58)
	2. Diluted (amount in Rs.)	1.10	0.56	(6.61)	1.22	0.64	(6.58)

Notes:
a) The above is an extract of the Unaudited Financial Results for the quarter and nine months ended December 31, 2025, filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the aforesaid Financial Results are available on the websites of the Stock Exchanges (www.nseindia.com and www.bseindia.com) and on the Company's website at www.wework.co.in/investors-relations/financial-information/#results. The same can also be accessed by scanning the Quick Response (QR) code.
b) The above Unaudited Standalone and Consolidated Financial Results were reviewed by the Audit Committee and approved by the Board of Directors at their meetings held on January 27, 2026. The said Financial Results are prepared in accordance with the Indian Accounting Standards (Ind AS) as prescribed under Section 133 of the Companies Act, 2013.
c) # - Exceptional items adjusted in the Statement of Profit and Loss in accordance with Ind-AS Rules.

For and on behalf of the Board of Directors

Karan Virwani
Managing Director & CEO
DIN: 03071954

For more information Please scan:

Place: Bengaluru
Date: January 27, 2026

Registered Office: 6th Floor, Prestige Central, 36 Infantry Road, Shivaji Nagar, Bengaluru, Karnataka, India – 560001
Email ID: cswwi@wework.co.in | **Phone:** +91 88 8456 4500 | **Website:** www.wework.co.in

ಪತ್ನಿ ಚಲನವಲನ ತಿಳಿಯಲು ಆ್ಯಪ್ ಬಳಕೆ: ಎಫ್‌ಐಆರ್

ಬೆಂಗಳೂರು: ಪತ್ನಿಯ ಮೊಬೈಲ್‌ನಲ್ಲಿ ರಹಸ್ಯವಾಗಿ ಆ್ಯಪ್ ಅಳವಡಿಸಿ ಅವರ ಪ್ರತಿ ಚಲನವಲನ ಪತ್ತೆ ಹಚ್ಚುತ್ತಿದ್ದ ಪತಿ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಟ್ಟೇನಹಳ್ಳಿಯ ಬಿ.ಜಿ ರಸ್ತೆಯ ವೈದ್ಯೆ ಡಾ.ಆರ್ಯ ಶಾರದಾ (28) ಎಂಬುವವರು ನೀಡಿದ ದೂರು ಆಧರಿಸಿ ಅವರ ಪತಿ ಅಮಲ್ ವಿ. ನಾಯರ್ ವಿರುದ್ಧ ಎಫ್‌ಆರ್ ದಾಖಲಾಗಿದೆ. ಆರ್ಯ ಶಾರದಾ ಹಾಗೂ ಅಮಲ್ ವಿ. ನಾಯರ್ ದಂಪತಿ, 2025ರ ಆ.1 ರಿಂದ ವಾಸ ಮಾಡುತ್ತಿದ್ದಾರೆ. ದಂಪತಿಗೆ ಒಂದು ಮಗುವಿದ್ದು, ಮಗು ಯಾರ ಬಳಿ ಇರಬೇಕೆಂಬ ಪ್ರಕರಣವು ಕೌಟುಂಬಿಕ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಈ ನಡುವೆ ವಾರಕ್ಕೊಮ್ಮೆ ಮಗುವನ್ನು ನೋಡಲು ಬರುವ ವೇಳೆ ಅಮಲ್ ಅವರು ಪತ್ನಿಗೆ ತಿಳಿಯದಂತೆ ಮೊಬೈಲ್‌ನಲ್ಲಿ ಆ್ಯಪ್‌ವೊಂದನ್ನು ಇನ್‌ಸ್ಟಾಲ್ ಮಾಡಿದ್ದರು. ಪತ್ನಿ ಎಲ್ಲಿ ಹೋಗುತ್ತಾರೆ? ಯಾರ ಜತೆಯಲ್ಲಿ ಮಾತನಾಡುತ್ತಾರೆ ಎಂಬುದರ ಮಾಹಿತಿ ಪಡೆದುಕೊಳ್ಳುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಎಟಿಎಂಗೆ ತುಂಬಿಸುವ ಕೋಟಿಗೂ ಅಧಿಕ ಹಣ ವಂಚನೆ

ಬೆಂಗಳೂರು: ಸಿಎಂಎಸ್ ಸೆಕ್ಯುರಿ ಟೀಸ್ ಕಂಪನಿ ಕಸ್ಟೋಡಿಯನ್ ವಾಹನ ಅಡ್ಡಗಟ್ಟಿ ರಾಬರಿ ಮಾಡಿದ್ದ ಪ್ರಕರಣ ಮಾಸುವ ಮುನ್ನ ಮತ್ತೆರಡು ಅಂಥದ್ದೇ ಪ್ರಕರಣಗಳು ಬೆಂಗಳೂರಿ ನಲ್ಲಿ ವರದಿಯಾಗಿದೆ. ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಟಿಎಂಗೆ ತುಂಬಿಸಲು ನೀಡಲಾಗಿದ್ದ 1 ಕೋಟಿಗೂ ಅಧಿಕ ಹಣ ವಂಚಿಸಲಾಗಿದ್ದು, ಕೋರ ಮಂಗಲ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಪೇಮೆಂಟ್ ಸರ್ವಿಸ್ ಕಂಪನಿಯೊಂದು ಕೆಲವು ಬ್ಯಾಂಕ್‌ಗಳ ಎಟಿಎಂ ಯಂತ್ರಗಳಿಗೆ ಹಣ ತುಂಬಿ ಸುವ ಪರವಾನಗಿ ಪಡೆದಿತ್ತು. ಆದರೆ ಈ ಕೆಲಸ ಮಾಡುತ್ತಿದ್ದ ಪ್ರವೀಣ್, ಧನಶೇಖರ್, ರಾಮಕ್ಕ ಹಾಗೂ ಹರೀಶ್ ಕುಮಾರ್ ಎಂಬ ಆರೋಪಿಗಳು 57 ಲಕ್ಷ ರುಪಾಯಿ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ. ಇದೇ ಕಂಪನಿಯಲ್ಲಿದ್ದ ಹರೀಶ್ ಕುಮಾರ್, ಪ್ರವೀಣ್ ಕುಮಾರ್ ಹಾಗೂ ವರುಣ್ ಎಂಬ ಆರೋಪಿಗಳ ಮತ್ತೊಂದು ತಂಡ 80 ಲಕ್ಷ ರುಪಾಯಿ ವಂಚಿಸಿದೆ ಎಂದು ಆರೋಪಿಸಲಾಗಿದೆ.

ವಿಬಿ ರಾಮ್ ಜಿ ವಿರುದ್ಧ ಕಾಂಗ್ರೆಸ್ ಸಂಪು

ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ | ಸಂವಿಧಾನದ ಹಕ್ಕು ಕಸಿದಿದೆ ಎಂದು ಕೇಂದ್ರದ ವಿರುದ್ಧ ಸಿಎಂ ವಾಗ್ದಾಳಿ

ಬೆಂಗಳೂರು: ಕೇಂದ್ರ ಸರಕಾರದ ಜನವಿರೋಧಿ ನೀತಿಯನ್ನು ಕಾಂಗ್ರೆಸ್ ವಿರೋಧಿಸುತ್ತಿದ್ದು, ವಿಬಿ ರಾಮ್ ಜಿ ರದ್ದುಪಡಿಸಿ ನರೇಗಾ ಪುನರ್‌ಸ್ಥಾಪನೆಯಾಗುವವರೆಗೆ ಹೋರಾಟ ಮುಂದುವರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಫ್ರೀಡಂ ಪಾರ್ಕ್‌ನಲ್ಲಿ ಕೆಪಿಸಿಸಿ ವತಿಯಿಂದ ಆಯೋಜಿಸಿದ್ದ 'ಮನರೇಗಾ ಬಚಾವ್ ಸಂಗ್ರಾಮ್' ಅಂಗವಾಗಿ ಆಯೋಜಿಸಿದ್ದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 2005 ರಲ್ಲಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ನರೇಗಾ ಕಾಯ್ದೆಯನ್ನು ಜಾರಿಗೆ ತಂದಿದ್ದರು. ಅಂತೆಯೇ ಆಹಾರ ಹಕ್ಕು, ಕೆಲಸದ ಹಕ್ಕು, ಶಿಕ್ಷಣ ಹಕ್ಕು, ಮಾಹಿತಿ ಹಕ್ಕು, ಅರಣ್ಯ ಕಾಯ್ದೆಗಳನ್ನು ಕಾಂಗ್ರೆಸ್‌ನ ಸರಕಾರದ ಅವಧಿಯಲ್ಲಿಯೇ ಜಾರಿಗೆ ಬಂದ ಜನಪರ ಕಾಯ್ದೆಗಳಾಗಿದ್ದುವು. ಕಾಂಗ್ರೆಸ್ ಸರಕಾರ ಎಂದಿಗೂ ಮಹಿಳೆಯರಿಗೆ, ದಲಿತರಿಗೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಸಣ್ಣ ರೈತರು ಬಗ್ಗೆ ಕೇವಲ ಕಾಂಗ್ರೆಸ್ ಪಕ್ಷ ಮಾತ್ರ ಚಿಂತನೆ ಮಾಡುತ್ತದೆ ಎಂದರು.

ಆರ್‌ಎಸ್‌ಎಸ್ ಮಾರ್ಗದರ್ಶನದಂತೆ ಬಡವರ ಕಾರ್ಯಕ್ರಮಗಳನ್ನು ಬಿಜೆಪಿಯವರು ರದ್ದು ಮಾಡಿದ್ದಾರೆ. ಆರ್‌ಎಸ್‌ಎಸ್‌ನವರಿಗೆ ಬಡವರು ಮುಖ್ಯವಾಹಿನಿಗೆ ಬರುವುದು ಬೇಕಾಗಿಲ್ಲ. ಬಡವರು ಬಡವರಾಗಿಯೇ ಉಳಿದು ಸದಾಕಾಲ ಸೇವಕರಾಗಿಯೇ ಇರಬೇಕು ಎನ್ನುವುದು ಬಿಜೆಪಿ ಸಿದ್ದಾಂತ . ಬಡವರ ವಿರೋಧಿ ಬಿಜೆಪಿ ಬಡವರ ಪರವಾದ ಎಲ್ಲ ಕಾರ್ಯಕ್ರಮಗಳನ್ನೂ ರದ್ದುಗೊಳಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯವರು ಈ ಜನಪರ ಯೋಜನೆಗಳನ್ನು ನಾಶಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಉದ್ಯೋಗ ಸಿಗದಂತೆ ಮಾಡಲಾಗುತ್ತಿದೆ. ಸುಮಾರು ಶೇ. 53 ರಷ್ಟು ಮಹಿಳೆಯರು, ಶೇ. 28 ರಷ್ಟು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಮತ್ತು ಸುಮಾರು 5 ಲಕ್ಷ ಅಂಗವಿಕಲರು ಕೂಲಿ ಕೆಲಸದಲ್ಲಿ ನಿರತರಾಗಿದ್ದು, ನರೇಗಾ ಯೋಜನೆಯಿಂದ ಎಲ್ಲರಿಗೂ ಉದ್ಯೋಗ ಸಿಗುವಂತಾಗಿತ್ತು. ಆದರೆ ಕೇಂದ್ರ ಸರಕಾರ, ಆರ್‌ಎಸ್‌ಎಸ್ ಅವರ ಜತೆಗೂಡಿ ಬಡಜನರು ಸದಾ ಸೇವಕರಾಗಿಯೇ ಇರಬೇಕೆಂದು ಹುನ್ನಾರ ಮಾಡಿದ್ದಾರೆ ಎಂದರು.

ಬಿಜೆಪಿಯವರು ಕಾಂಗ್ರೆಸ್‌ನ ಜನಪರ ಗ್ಯಾರಂಟಿ ಯೋಜನೆಗಳ ಬಗ್ಗೆ ವೋಟ್‌ಗಾಗಿ ಮಾಡಿದ ಯೋಜನೆಗಳು ಎಂದು ಟೀಕಿಸುತ್ತಿದ್ದರು. ಮಹಿಳೆಯರಿಗೆ, ದಲಿತರಿಗೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಸಣ್ಣ ರೈತರು ನರೇಗಾಯಿಂದ ವರ್ಷದ ಯಾವುದೇ ದಿನಗಳಲ್ಲಿ ಕೆಲಸ ಮಾಡಬಹುದಿತ್ತು. ಗ್ರಾಮಸಭೆಗಳು ಹಾಗೂ ಗ್ರಾಮ ಪಂಚಾಯತಿಗಳು ಈ ಮೊದಲು ಕೆಲಸವನ್ನು ನಿರ್ಧರಿಸಲಾಗುತ್ತಿತ್ತು. ಆದರೆ ಈಗ ಬಡವರ ಗ್ರಾಮೀಣ ಬಡಜನರ ಕೆಲಸವನ್ನು ಸ್ಥಳೀಯ ಗ್ರಾಮೀಣ ಆಡಳಿತ ಬಿಟ್ಟು , ದಿಲ್ಲಿಯಲ್ಲಿ ನಿರ್ಧರಿಸಲಾಗುತ್ತದೆ ಎಂದರು.

ಬಿಜೆಪಿ ಚರ್ಚಿಸುತ್ತಿಲ್ಲ: ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ದೇಶದಲ್ಲಿ ಸಮಾನತೆ ಸ್ಥಾಪನೆಯಾಗಿಸಲು ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆಯಬೇಕು. ಮಹಾತ್ಮಾ ಗಾಂಧಿಯವರು ಗ್ರಾಮ ಸ್ವರಾಜ್ಯ ಪ್ರತಿಪಾದಿಸಿದರು. ಗೋಡ್ಸೆಯವರು ಮಹಾತ್ಮಾಗಾಂಧಿಯವರ ಹತ್ಯೆಯನ್ನು ಮಾಡಿದರೆ, ಬಿಜೆಪಿಯವರು ನರೇಗಾ ಯೋಜನೆಯನ್ನು ರದ್ದುಗೊಳಿಸುವ ಮೂಲಕ, ಮಹಾತ್ಮಾ ಗಾಂಧಿಯವರನ್ನು ಮತ್ತೊಮ್ಮೆ ಹತ್ಯೆ ಮಾಡಿದಂತಾಗಿದೆ. ಬಿಜೆಪಿಯವರು ಈಗ ಸುಳ್ಳು ಹೇಳುತ್ತಿದ್ದಾರೆ . ಈ ಕಾಯಿದೆಯ ರದ್ದತಿಯ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನವನ್ನು ಕರೆಯಲಾಗಿದೆ. ಆದರೆ ಬಿಜೆಪಿಯವರು ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡುತ್ತಿಲ್ಲ. ಆದರೆ ರದ್ದತಿಯ ವಿರುದ್ಧ ಸರಕಾರ ಖಂಡಿತ ನಿರ್ಣಯ ಕೈಗೊಳ್ಳಲಿದೆ ಎಂದು ತಿಳಿಸಿದರು.

ಗಾಂಧಿ ಪ್ರತಿಮೆ ಮುಂದೆ ಕೂರುವ ನೈತಿಕತೆ ಇಲ್ಲ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬಿಜೆಪಿ ನಾಯಕರು ಗಾಂಧಿ ಪ್ರತಿಮೆ ಮುಂದೆ ಕೂತು ಪ್ರತಿಭಟನೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂತು. ಬಿಜೆಪಿಯವರು ಗಾಂಧಿ ಪ್ರತಿಮೆ ಮುಂದೆ ಕೂರುವ ಹಕ್ಕನ್ನು ಕಳೆದುಕೊಂಡಿದ್ದೀರಿ. ಇನ್ನುಮುಂದೆ ನಿಮ್ಮ ಕಚೇರಿಯಲ್ಲಿ ಗಾಂಧಿ ಭಾವಚಿತ್ರ ಇಟ್ಟುಕೊಳ್ಳುವ ಯೋಗ್ಯತೆ ನಿಮಗಿಲ್ಲ. ಗಾಂಧಿ ಅವರನ್ನು ನಾಥುರಾಮ್ ಗೋಡ್ಸೆ ಹತ್ಯೆ ಮಾಡಿದ್ದಲ್ಲದೇ, ಬಿಜೆಪಿ ಹಾಗೂ ಎನ್ ಡಿಎ ಸರಕಾರ ಈಗ ಮತ್ತೆ ಗಾಂಧೀಜಿ ಅವರನ್ನು ಹತ್ಯೆ ಮಾಡುತ್ತಿದ್ದೀರಿ. ಅವರ ಹೆಸರನ್ನು ಅಳಿಸಿಹಾಕಲು ಸಾಧ್ಯವಿಲ್ಲ ಎಂದು ವಾಗ್ದಾಳಿ ನಡೆಸಿದರು.

ಹಳ್ಳಿಗಳ ಉದ್ಧಾರಕ್ಕೆ ನೀಡಿದ ಯೋಜನೆ ನರೇಗಾ. ಬಿಜೆಪಿಯಿಂದ ದೇಶಕ್ಕೆ ಹರಡುತ್ತಿದೆ ನಿರುದ್ಯೋಗದ ರೋಗ. ಬಿಜೆಪಿ ಗಾಂಧಿ ದ್ವೇಷಕ್ಕೆ ಧಿಕ್ಕಾರ. ನರೇಗಾ ರದ್ದಾಗಲು ಎಂದಿಗೂ ಬಿಡುವುದಿಲ್ಲ. ಬೇಡ ನಮಗೆ ವಿಬಿ ಗ್ರಾಮ್ ಜೀ. ಬೇಕೆ ಬೇಕು ನಮಗೆ ಗಾಂಧಿ. ಇವತ್ತು ಪೊಲೀಸರು ನಮ್ಮನ್ನು ಬಂಧಿಸಿದರೂ ನಾವು ಹಿಂಜರಿಯುವುದಿಲ್ಲ, ಸರಕಾರ ಇದ್ದರೂ ನಾವು ಜೈಲಿಗೆ ಹೋದರೂ ಸರಿ, ನರೇಗಾ ಯೋಜನೆ ಮರುಜಾರಿಗೆ ಹೋರಾಟ ಮುಂದುವರಿಸುತ್ತೇವೆ. ಕೇಂದ್ರ ಸರಕಾರ ಕೃಷಿ ಕರಾಳ ಕಾಯ್ದೆಯನ್ನು ಹಿಂಪಡೆದಂತೆ ಇದನ್ನು ಹಿಂಪಡೆಯುವವರೆಗೂ ನಮ್ಮ ಹೋರಾಟ ನಡೆಯಲಿದೆ ಎಂದರು.

ಕುಮಾರಸ್ವಾಮಿ, ಬಿಜೆಪಿ ನಾಯಕರು ಚರ್ಚೆಗೆ ಬರಲಿ, ನಾನು ಸಿದ್ಧನಿದ್ದೇನೆ. ಈ ಯೋಜನೆ ಜಾರಿಯಾಗಿ 20 ವರ್ಷಗಳಿವೆ. ಕಳೆದ 11 ವರ್ಷಗಳಿಂದ ನಿಮ್ಮದೇ ಸರಕಾರ ಅಧಿಕಾರದಲ್ಲಿದೆ. ಈ ಯೋಜನೆಯಲ್ಲಿ ಅಕ್ರಮ ನಡೆದಿದ್ದರೆ ನೀವು ಏನು ಮಾಡುತ್ತಿದ್ದಿರಿ? ನಮ್ಮ ಪಂಚಾಯ್ತಿಗಳಲ್ಲಿ ಅಕ್ರಮ ನಡೆದ ಪ್ರಕರಣಗಳಲ್ಲಿ ನಾವು ಕ್ರಮ ಕೈಗೊಂಡಿದ್ದೇವೆ. ಯಾರೋ ಕೆಲವರು ತಪ್ಪು ಮಾಡಿದರೆ ಇಡೀ ಯೋಜನೆಯನ್ನೇ ಬದಲಿಸುವುದೇ? ಆಮೂಲಕ ಮೂಗು ಕತ್ತರಿಸಿಕೊಳ್ಳುವ ಕೆಲಸ ಮಾಡುವುದು ಸರಿಯೇ? ಎಂದು ಕಿಡಿಕಾರಿದರು.

ಫ್ರೀಡಂ ಪಾರ್ಕ್‌ನಲ್ಲಿ ನಡೆದ ನರೇಗಾ ಬಚಾವ್ ಸಂಗ್ರಾಮ್ ಬೃಹತ್ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸುರ್ಜೇವಾಲಾ ಸೇರಿದಂತೆ ಹಲವು ಸಚಿವರ, ಕಾಂಗ್ರೆಸ್ ಶಾಸಕರುಗಳು, ಪ್ರಮುಖ ಮುಖಂಡರುಗಳು, ನೂರಾರು ಕಾರ್ಯಕರ್ತರುಗಳು ಭಾಗಿಯಾಗಿ ಮನರೇಗಾ ಪುರ್ನ ಸ್ಥಾಪಿಸುವಂತೆ ಕೇಂದ್ರಕ್ಕೆ ಆಗ್ರಹಿಸಿದರು.

ವಿಬಿ ರಾಮ್ ಜಿ ಕಾಯಿದೆ ವಿರೋಧಿಸಿ ಕೇಂದ್ರ ಸರಕಾರದ ವಿರುದ್ಧ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ವೀರಪ್ಪ ಮೊಯ್ಲಿ ಸೇರಿ ಹಲವರಿದ್ದರು.

ಲೋಕಭವನ ಚಲೋ ತಡೆದ ಪೊಲೀಸರು

ಸ್ವಾತಂತ್ರ್ಯ ಉದ್ಯಾನವನದಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆ ವಿರುದ್ಧ ಪ್ರತಿಭಟನೆ ನಡೆಸಿ ರಾಜಭವನ ಚಲೋಗೆ ಮುಂದಾದ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರುಗಳನ್ನು ಪೊಲೀಸರು ವಶಕ್ಕೆ ಪಡೆದು ರಾಜಭವನ ಮುತ್ತಿಗೆಯನ್ನು ವಿಫಲಗೊಳಿಸಿದರು. ಕಾಂಗ್ರೆಸ್‌ನ ಪ್ರತಿಭಟನೆ ಹಿನ್ನೆಲೆಯಲ್ಲಿ ಸ್ವತಂತ್ರ ಉದ್ಯಾನವನದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋ ಬಸ್ತ್ ಮಾಡಲಾಗಿತ್ತು. ಪ್ರತಿಭಟನೆ ಮುಗಿಯುವವರೆಗೂ ಶೇಷಾದ್ರಿ ರಸ್ತೆಯಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿತ್ತು. ಇದರಿಂದ ಆನಂದರಾವ್ ವೃತ್ತದಿಂದ ಕೆ.ಆರ್. ವೃತ್ತಕ್ಕೆ ತೆರಳುವ ವಾಹನ ಸವಾರರು ತೊಂದರೆಗೆ ಸಿಲುಕಿದರು. ಕಾಂಗ್ರೆಸ್ನ ಈ ಪ್ರತಿಭಟನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗಿಯಾಗಿದ್ದು, ಬೆಂಗಳೂರಿನ ಎಲ್ಲ ವಿಧಾನಸಭಾ ಕ್ಷೇತ್ರಗಳಿಂದಲೂ ಕಾರ್ಯಕರ್ತರುಗಳು ಪ್ರತಿಭಟನೆಗೆ ಆಗಮಿಸಿದ್ದರು.

ಭಾರತ ಹಳ್ಳಿಗಳ ದೇಶ, ಹಳ್ಳಿಗಳು ಅಭಿವೃದ್ಧಿ ಆದರೆ ದೇಶ ಅಭಿವೃದ್ಧಿಯಾದಂತೆ ಎಂದು ಮಹಾತ್ಮಗಾಂಧಿ ಹೇಳುತ್ತಿದ್ದರು. ಈ ಮಾತನ್ನು ಸಕಾರಗೊಳಿಸಿದ್ದು ರಾಜೀವ್ ಗಾಂಧಿ, ಇದಕ್ಕೆ ಗ್ರಾಮ ಪಂಚಾಯತಿಗಳಿಗೆ ಹೆಚ್ಚು ಅಧಿಕಾರ ನೀಡಿದರು. ಮನರೇಗಾ ಬರುವುದಕ್ಕೂ ಮೊದಲು ಗ್ರಾಮ ಪಂಚಾಯತಿಗಳನ್ನು ಕೇಳುವವರಿರಲಿಲ್ಲ. ಕರೆಂಟ್ ಬಿಲ್ ಕಟ್ಟೋಕು ಪರದಾಡುತ್ತಿದ್ದ ಗ್ರಾಮ ಪಂಚಾಯತಿಗಳು ಮನರೇಗಾ ಬಂದ ಮೇಲೆ ಸಾಕಷ್ಟು ಸುಧಾರಣೆ ಕಂಡಿವೆ. ಇದರ ಫಲವಾಗಿ ಇಂದು ಗ್ರಾಮ ಪಂಚಾಯತಿ ಚುನಾವಣೆಗೆ ನಿಲ್ಲಲು ಸಾಕಷ್ಟು ಪೈಪೋಟಿ ಏರ್ಪಟ್ಟಿದೆ. ಕೇಂದ್ರ ಮನರೇಗಾ ಯೋಜನೆಯನ್ನು ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಜಾರಿಗೊಳಿಸಲು ಹೊರಟಿದೆ. ಕೇಂದ್ರ ಸರಕಾರಕ್ಕೆ ರೈತರ, ಮಹಿಳೆಯರು, ಕೂಲಿ ಕಾರ್ಮಿಕರ ಬಗ್ಗೆ ಚಿಂತೆ ಇಲ್ಲ.

– ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಕೇಂದ್ರ ಬಿಜೆಪಿ ಸರಕಾರ ನರೇಗಾ ಯೋಜನೆ ಅನುದಾನವನ್ನು ಬಾಕಿ ಉಳಿಸಿಕೊಂಡಿದೆ. ಬಿಜೆಪಿ ಆಡಳಿತ ರಾಜ್ಯಗಳಲ್ಲಿ ಕೇಂದ್ರ ಸರಕಾರದ ನೂತನ ಯೋಜನೆ ಅನುಷ್ಠಾನ ಸಾಧ್ಯವಿಲ್ಲ. ಎನ್ ಡಿಎ ಮೈತ್ರಿ ನಾಯಕ ಚಂದ್ರಬಾಬು ನಾಯ್ಡು ಅವರೇ ಈ ಯೋಜನೆಗೆ ಅಪಸ್ವರ ಎತ್ತಿದ್ದು, ಇದನ್ನು ಜಾರಿ ಸಾಧ್ಯವಿಲ್ಲ ಎಂದಿದ್ದಾರೆ. ಕೇಂದ್ರ ಬಿಜೆಪಿ ಸರಕಾರ ನೂತನ ಕಾಯಿದೆ ಹಿಂಪಡೆಯದಿದ್ದರೆ ಸರಕಾರಕ್ಕೆ ಆಪತ್ತು ಎದುರಾಗಲಿದೆ. ಚಂದ್ರಬಾಬು ನಾಯ್ಡು ಅವರು ಎಚ್ಚರಿಕೆ ಗಂಟೆ ರವಾನಿಸಿದ್ದಾರೆ.

– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಯುಪಿಎ ಸರಕಾರ ಮಹಾತ್ಮಗಾಂಧಿ ಹೆಸರಿನಲ್ಲಿ ಗ್ರಾಮೀಣ ಭಾಗದ ಜನರ ಉದ್ಯೋಗ ಹಕ್ಕಿಗೆ ಖಾತ್ರಿ ನೀಡಿತ್ತು. ಈಗ ಈ ಮನರೇಗಾ ಯೋಜನೆಯ ಸ್ವರೂಪವನ್ನೇ ಬದಲಾಯಿಸಲಾಗಿದೆ. ಸಾಂವಿಧಾನಿಕ ಹಕ್ಕಾಗಿ ಬಂದಿರುವ ಮನರೇಗಾವನ್ನು ಕೇಂದ್ರ ಸರಕಾರ ನಾಶ ಮಾಡಲು ಹೊರಟಿದೆ. ಕೇಂದ್ರ ಸರಕಾರ ಮನರೇಗಾ ಯೋಜನೆಯನ್ನು ಪುನರ್ ಸ್ಥಾಪಿಸಬೇಕು ಹಾಗೂ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಗೊಳಿಬೇಕು ಎಂದು ಆಗ್ರಹಿಸಿ ದೇಶದ ಉದ್ದಗಲಕ್ಕೂ ಕಾಂಗ್ರೆಸ್ ಹೋರಾಟ ರೂಪಿಸಿದೆ. ಅದರಂತೆ ಪ್ರತಿ ಪಂಚಾಯ್ತಿಗಳಲ್ಲೂ ಕಾಂಗ್ರೆಸ್ ಹೋರಾಟ ನಡೆಸಲಿದೆ.

– ರಣದೀಪ್ ಸಿಂಗ್ ಸುರ್ಜೇವಾಲ
ಎಐಸಿಸಿ ಪ್ರಧಾನ ಕಾರ್ಯದರ್ಶಿ

ಸಮಾಚಾರ ಸಣ್ಣದಲ್ಲ

ಗರ್ಭಪಾತವಾಗಬೇಕಿದ್ದ ಪ್ರಕರಣ ಯಶಸ್ವಿ ಹೆರಿಗೆ

ಬೆಂಗಳೂರು: 33 ವರ್ಷದ ಗರ್ಭಿಣಿಯೊಬ್ಬರು ಅತ್ಯಂತ ಸವಾಲಿನ ಸ್ಥಿತಿ ದಾಟಿ ಆರೋಗ್ಯವಂತ ಹೆಣ್ಣು ಮಗುವಿಗೆ ಜನ್ಮ ನೀಡಿರುವ ಘಟನೆ ನಗರದ ವಾಸವಿ ಆಸ್ಪತ್ರೆಯಲ್ಲಿ ನಡೆದಿದೆ ಎಂದು ಮಹಿಳಾ ಆರೋಗ್ಯ ಮತ್ತು ಪ್ರಸೂತಿ ತಜ್ಞೆ ಡಾ. ನಿಶಾ ಬುಚಾಡೆ ತಿಳಿಸಿದ್ದಾರೆ. ಯುವತಿಯು ಮೊದಲ ಬಾರಿ ಗರ್ಭಿಣಿಯಾಗುತ್ತಿರುವ ಸಂತಸ ಒಂದೆಡೆ ಯಾದರೆ ಮತ್ತೊಂದೆಡೆ ಆರಂಭಿಕ ಹಂತದಲ್ಲೇ ಸಮಸ್ಯೆಗಳು ಕಂಡುಬಂದಿದ್ದು ಆತಂಕಕ್ಕೆ ಕಾರಣ ವಾಗಿತ್ತು. ಗರ್ಭಿಣಿಗೆ 16ನೇ ವಾರದಲ್ಲಿ ಗರ್ಭಕಂಠವು ತೆರೆದುಕೊಳ್ಳುತ್ತದೆ ಮತ್ತು 25ನೇ ವಾರದಲ್ಲಿ ಭ್ರೂಣದ ಬೆಳವಣಿಗೆಯಲ್ಲಿ ತೀವ್ರ ಕುಂಠಿತ ಕಂಡುಬರುತ್ತದೆ. ಇದರ ಜತೆಗೆ ಮಗುವಿಗೆ ಒಂದೇ ಅಪಧಮನಿ ಇರುವುದು ಕಂಡುಬರುತ್ತದೆ. ಒಂದು ವೇಳೆ ಈ ರೀತಿ ಗರ್ಭಕಂಠವು ತೆರೆದುಕೊಂಡಾಗ ಚಿಕಿತ್ಸೆ ನೀಡದಿದ್ದರೆ ಗರ್ಭಪಾತ ಅಥವಾ ಅವಧಿಗೂ ಮುನ್ನ ಹೆರಿಗೆಗೆ ಕಾರಣವಾಗಲಿದೆ. ಈ ರೀತಿಯ ಸಮಸ್ಯೆಗೆ ಒಳಗಾದ ಗರ್ಭಿಣಿಯು ತಪಾಸಣೆ ಮಾಡಿಸಿಕೊಳ್ಳಲು ಆಸ್ಪತ್ರೆಗೆ ಭೇಟಿ ನೀಡಿದಾಗ ಮಹಿಳೆಯ ಗರ್ಭಕಂಠವು ಈಗಾಗಲೇ ತೆರೆಯಲು ಪ್ರಾರಂಭಿಸಿರುವುದು ಮತ್ತು ಭ್ರೂಣದ ಪೊರೆಗಳು ಹೊರಬರುತ್ತಿರುವುದು ತಜ್ಞರಿಗೆ ಕಂಡುಬಂದಿದೆ. ಗರ್ಭಕಂಠ ಈಗಾಗಲೇ ತೆರೆದಿದ್ದರಿಂದ ಅಪಾಯವಿರುವ ಕುರಿತು ಕುಟುಂಬಕ್ಕೆ ಮಾಹಿತಿ ನೀಡಿದರು. ತಕ್ಷಣವೇ ರೋಗಿಯನ್ನು ದಾಖಲಿಸಿಕೊಂಡು ಎಮರ್ಜೆನ್ಸಿ ಸರ್ವಿಕಲ್ ಸರ್ಕ್ಲೇಜ್ ಶಸ್ತ್ರಚಿಕಿತ್ಸೆ ನಡೆಸಿದರು. ಎರಡು ವಾರಗಳ ನಿರಂತರ ಚಿಕಿತ್ಸೆಯ ನಂತರ ರೋಗಿಯು ದೈನಂದಿನ ಚಟುವಟಿಕೆಗೆ ಮರಳಿದ್ದಾರೆ.

ಕೆಫೆಗಳಲ್ಲಿ ಗಂಟೆಗಟ್ಟಲೆ ಕೂತರೆ ಸಾವಿರ ಶುಲ್ಕ

ಬೆಂಗಳೂರು: ಬೆಂಗಳೂರಿನ ಪ್ರಸಿದ್ಧ ಕೆಫೆಯೊಂದು ಹೆಚ್ಚು ಗಂಟೆಗಳ ಕಾಲ ಕಳೆಯುವವರಿಗೆ ಬಿಸಿ ಮುಟ್ಟಿಸಿದ್ದು, ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿದೆ. ಬೆಂಗಳೂರಿನ ಪ್ರಸಿದ್ಧ ಈಟರಿಯೊಂದು ತನ್ನ ಆವರಣ ದಲ್ಲಿ ದೀರ್ಘಾವಧಿಯ ಸಭೆಗಳನ್ನು ನಿಷೇಧಿಸಿ ಅಧಿಕೃತ ನೋಟಿಸ್ ಅಂಟಿಸಿದ್ದು, ನಿಗದಿಪಡಿಸಿದ ಸಮಯಕ್ಕಿಂತ ಹೆಚ್ಚು ಕಾಲ ಸಭೆ ಅಥವಾ ಲ್ಯಾಪ್‌ಟಾಪ್ ಮೂಲಕ ಕೆಲಸವನ್ನು ಮುಂದುವರಿಸಿದರೆ, ಪ್ರತಿ ಹೆಚ್ಚುವರಿ ಗಂಟೆಗೆ 1,000 ದಂಡ ಅಥವಾ ಸೇವಾ ಶುಲ್ಕ ಪಾವತಿಸ ಬೇಕಾಗುತ್ತದೆ ಎಂದು ನೋಟಿಸ್ ಹಾಕಿದೆ. ಸಣ್ಣ ಕೆಫೆ ಗಳಲ್ಲಿ ಜನರು ಕೇವಲ ಒಂದು ಕಪ್ ಕಾಫಿ ಆರ್ಡರ್ ಮಾಡಿ ಗಂಟೆಗಟ್ಟಲೆ ಲ್ಯಾಪ್‌ಟಾಪ್ ಹಿಡಿದು ಕುಳಿತುಕೊಳ್ಳುವುದರಿಂದ, ಹೊಸದಾಗಿ ಬರುವ ಗ್ರಾಹಕರಿಗೆ ಸೀಟು ಸಿಗುತ್ತಿಲ್ಲ. ಇದರಿಂದ ವ್ಯಾಪಾರಕ್ಕೆ ನಷ್ಟವಾಗುತ್ತಿದೆ ಎಂದು ಮಾಲೀಕರು ಅಳಲು ತೋಡಿಕೊಂಡಿದ್ದಾರೆ. ಈ ನೋಟಿಸ್ ಸಾಮಾಜಿಕ ಜಾಲತಾಣದಲ್ಲಿ ಭಾರಿ ಸದ್ದು ಮಾಡಿದ್ದು, ಕೆಫೆಗಳು ವ್ಯಾಪಾರ ಮಾಡಲು ಇರುವ ಜಾಗವೇ ಹೊರತು ಉಚಿತ ಕೋ-ವರ್ಕಿಂಗ್ ಸ್ಪೇಸ್ ಅಲ್ಲ. ಮಾಲೀಕರ ನಿರ್ಧಾರ ಸರಿ ಇದೆ ಅನೇಕರ ಕಮೆಂಟ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಮನೆಗಳು ಚಿಕ್ಕದಾಗಿರುತ್ತವೆ ಮತ್ತು ಆಫೀಸ್ ದೂರವಿರುತ್ತದೆ, ಹೀಗಾಗಿ ಕೆಫೆಗಳೇ ನಮಗೆ ಆಸರೆ. ಇಷ್ಟು ದುಬಾರಿ ಶುಲ್ಕ ವಿಧಿಸುವುದು ಸರಿಯಲ್ಲ ಎಂದು ಕೆಲವರು ಕಮೆಂಟ್ ಮಾಡಿದ್ದಾರೆ.

ಫಲಪುಷ್ಪ ಮೇಳಕ್ಕೆ ಕಿದ್ವಾಯಿ ಮಕ್ಕಳು ಭೇಟಿ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನಡೆದ ಫಲಪುಷ್ಪ ಪ್ರದರ್ಶನದ ವೈಭವವನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳು ಕಣ್ತುಂಬಿಸಿಕೊಂಡರು. ಲಾಲ್‌ಬಾಗ್‌ನ ಆಡಳಿತ ಮಂಡಳಿಯು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳು ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಅವಕಾಶ ಮಾಡಿಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳು ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದರು. ಗಾಜಿನ ಮನೆಯ ಒಳಗೂ, ಹೊರಗೂ ತೇಜಸ್ವಿ ಯವರ ಕ್ಯಾರಿಕೇಚರ್‌ಗಳು, ತೇಜಸ್ವಿಯವರು ಕ್ಯಾಮೆರಾ ಹಿಡಿದು ನಿಂತಿರುವುದು, ಮೀನಿಗೆ ಗಾಳ ಹಾಕುತ್ತಿರುವುದು, ತಂದೆಯೊಂದಿಗೆ ದ್ವಿಚಕ್ರ ವಾಹನದಲ್ಲಿ ಸಾಗುತ್ತಿರುವ ತೇಜಸ್ವಿ ಹೀಗೆ ಹತ್ತು ಹಲವು ಚಿತ್ರಗಳನ್ನು ಆಸ್ಪತ್ರೆಯ ಮಕ್ಕಳು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಇಂತಹ ಫಲಪುಷ್ಪ ಪ್ರದರ್ಶನಗಳು ಮಾನಸಿಕ ಹಾಗೂ ದೈಹಿಕ ಬಲ ನೀಡಲಿದೆ. ನೋವಿನಿಂದ ಬಳಲುವ ಮಕ್ಕಳ ಮನಸ್ಸಿಗೆ ನೆಮ್ಮದಿಯನ್ನು ನೀಡಲಿದೆ. ಪ್ರಕೃತಿ ವೀಕ್ಷಿಸಿದಾಗ ಮಕ್ಕಳಲ್ಲಿನ ಮಾನಸಿಕ ಒತ್ತಡ ಕಡಿಮೆಯಾಗಲಿದೆ. ಎಲ್ಲಾ ಮಕ್ಕಳಂತೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳು ಲಾಲ್‌ಬಾಗ್‌ನ ಫಲಪುಷ್ಪ ಪ್ರದರ್ಶನ ವೀಕ್ಷಣೆ ಮಾಡುವ ಮೂಲಕ ಪ್ರಕೃತಿಯ ವೈಭವ, ಹೂಗಳ ಚಿತ್ತಾರ ಕಣ್ತುಂಬಿಸಿಕೊಂಡಿದ್ದಾರೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಅವರು ತಿಳಿಸಿದ್ದಾರೆ.

26 ಲಕ್ಷ ರು. ಬೆಲೆಯ ಅಕ್ರಮ ಮದ್ಯ ವಶ

ಬೆಂಗಳೂರು: ನಗರ ಜಿಲ್‌ಎಲ್-3 ವ್ಯಾಪ್ತಿಯಲ್ಲಿ ಅಬಕಾರಿ ಆಯುಕ್ತ, ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಬೆಂಗಳೂರು ವಿಭಾಗ (ಉತ್ತರ) ಬೆಂಗಳೂರು ಇವರ ಮಾರ್ಗ ದರ್ಶನದಲ್ಲಿ ಜನವರಿಯಲ್ಲಿ ಒಟ್ಟು 26 ಲಕ್ಷ ರು.ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆ (ಬಿಯುಡಿ-3) ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ.

ಜ. 1 ರಂದು ವಲಯ-18 ಜ್ಞಾನಭಾರತಿ ವಲಯ ವ್ಯಾಪ್ತಿಯ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್, 60 ಅಡಿ ರಸ್ತೆ ಉಲ್ಲಾಳ ರಸ್ತೆ, ಕ್ರಾಸ್, ಸರ್.ಎಂ.ವಿ, ರೈಲ್ವೇ ಲೇಔಟ್, ಜ್ಞಾನಗಂಗಾನಗರ, ಉಲ್ಲಾಳ, ಬೆಂಗಳೂರು ಇಲ್ಲಿ ಅಬಕಾರಿ ಉಪ ಅಧೀಕ್ಷಕರಾದ ಮಲ್ಲಿಕಾರ್ಜುನ ರೆಡ್ಡಿ, ಅಬಕಾರಿ ನಿರೀಕ್ಷಕ ರಂಗಯ್ಯ, ಅಬಕಾರಿ ಉಪ ನಿರೀಕ್ಷಕ ಜಸ್ಮಂತ್ ಅವರ ನೇತೃತ್ವದಲ್ಲಿ ಕಾರ್ಯಚರಣೆ ನಡೆಸಿ ಒಟ್ಟು 40 ಬಾಟಲುಗಳು ಸೇರಿ 30 ಲೀ. ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಢಿಫೆನ್ಸ್ ಮದ್ಯ ವಶಪಡಿಸಿಕೊಂಡು ಒಂದು ಕಾರು ಜಪ್ತಿ ಮಾಡಲಾಗಿದೆ. ವಶಕ್ಕೆ ಪಡೆದ ಮದ್ಯ ಹಾಗೂ ವಾಹನಗಳ ಒಟ್ಟು ಮೌಲ್ಯ 9 ಲಕ್ಷ ರು. ಹಾಗೂ ಪ್ರಕರಣದ ಆರೋಪಿ ಜ್ಞಾನಜ್ಯೋತಿನಗರ ನಿವಾಸಿ 33 ವರ್ಷದ ಎಸ್.ಕಿರಣ್ ಇವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ.

ಜ.24 ರಂದು ವಲಯ 17 ಕೆಂಗೇರಿ ವ್ಯಾಪ್ತಿಯ ಮಾದವಾರ ಗ್ರಾಮ, ದಾಸನಾಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು ಎನ್.ಎಚ್.48 ರ ಬೆಂಗಳೂರಿನಿಂದ ತುಮಕೂರು ಕಡೆಗೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಸಾಗಾಣೆ ಮಾಡಲಾಗುತ್ತಿದ್ದ ಒಟ್ಟು 49 ಬಾಟಲುಗಳು ಸೇರಿ 36.750 ಲೀ. ಡಿಫೆನ್ಸ್ ಮದ್ಯವನ್ನು ಹಾಗೂ ವಾಹನಗಳ ಒಟ್ಟು ಮೌಲ್ಯ 17 ಲಕ್ಷ ರು. ಹಾಗೂ ಪ್ರಕರಣದ ಆರೋಪಿ ಬಳ್ಳಾರಿ ನಿವಾಸಿ 27 ವರ್ಷದ ಜಿ.ಗೋವಿಂದರಾಜ್ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ. ಜನವರಿಯಲ್ಲಿ ಒಟ್ಟು 89 ಬಾಟಲ್‌ಗಳು ಸೇರಿ 66.750 ಲೀಟರ್ ಡಿಫೆನ್ಸ್ ಪರ್ಸನಲ್‌ಗಾಗಿ ಮೀಸಲಿರುವ ಮದ್ಯವನ್ನು ಮತ್ತು 2 ಕಾರುಗಳು ಸೇರಿದಂತೆ ಒಟ್ಟು 26 ಲಕ್ಷ ರು. ಮೌಲ್ಯದ ಅಬಕಾರಿ ವಸ್ತು ಜಪ್ತಿ ಪಡಿಸಿ 2 ಆರೋಪಿಗಳನ್ನು ದಸ್ತಗಿರಿಗೊಳಿಸಿ ಮೊಕದ್ದಮೆ ದಾಖಲಿಸಲಾಗಿದೆ.

ರಥಸಪ್ತಮಿ: ಅದ್ಧೂರಿಯಾಗಿ ನಡೆದ ಚನ್ನರಾಯಸ್ವಾಮಿ ಬ್ರಹ್ಮರಥೋತ್ಸವ

ಮಹದೇವಪುರ: ರಥಸಪ್ತಮಿ ಪ್ರಯುಕ್ತ ವರ್ತೂರಿನಲ್ಲಿ ಶ್ರೀಭೂನಿಳಾ ಸಮೇತ ಶ್ರೀಚನ್ನರಾಯಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು. ದೇವಾಲಯದಲ್ಲಿ ಶ್ರೀಚನ್ನರಾಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಮುಖ ಬೀದಿಗಳಲ್ಲಿ ಸ್ವಾಮಿಯ ಮೂರ್ತಿಯ ಮೆರವಣಿಗೆ ನಂತರ ರಥದಲ್ಲಿ ಕೂರಿಸಿ, ಪೂಜೆ ಸಲ್ಲಿಸಿ ರಥವನ್ನು ಎಳೆಯಲಾಯಿತು.

ರಥೋತ್ಸವದ ಅಂಗವಾಗಿ ಶ್ರೀಚನ್ನರಾಯ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ, ಪೂಜಾ ಕೈಂಕರ್ಯಗಳು ನಡೆದವು, ವರ್ತೂರಿನ ಪ್ರಮುಖ ಬೀದಿಗಳಲ್ಲಿ ಬ್ರಹ್ಮರಥೋತ್ಸವ ಸಾಗಿತು. ಉತ್ಸವದಲ್ಲಿ ತಮಟೆ, ಪೂಜಾಕುಣಿತ, ನಾದಸ್ವರ, ಚಿಂಗಾರಿ ಮೇಳ, ಚಂಡಿ ಮೇಳ, ಚಟ್ಟಿಮೇಳ, ವೀರಗಾಸೆ, ಗಾರುಡಿಗೊಂಬೆ, ಡೊಳ್ಳು ಕುಣಿತವು ನೆರೆದಿದ್ದ ಭಕ್ತರನ್ನು ಗಮನಸೆಳೆಯಿತು. ರಥೋತ್ಸವಕ್ಕೆ ಸುತ್ತಮುತ್ತಲಿನ ಗ್ರಾಮಗಳಾದ ವೈಟ್ ಫೀಲ್ಡ್, ಬಳಗೆರೆ, ಸೊರುಹುಣಸೆ, ಗುಂಜೂರು, ವಾಲೇಪುರ, ಮದುರನಗರ, ಸೇರಿದಂತೆ ಸುತ್ತಮುತ್ತಲಿನ ಹತ್ತಾರು ಗ್ರಾಮಗಳಿಂದ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು.

ಈ ವೇಳೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಎಚ್.ನಾಗೇಶ್, ಮುಖಂಡರಾದ ಕುಪ್ಪಿ ಮಂಜುನಾಥ್, ವರ್ತೂರು ಶ್ರೀಧರ್, ಮಹೇಂದ್ರ ಮೋದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ವರ್ತೂರಿನಲ್ಲಿ ನಡೆದ ಶ್ರೀಚನ್ನರಾಯಸ್ವಾಮಿ ಬ್ರಹ್ಮರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ದಾಖಲೆ ಇಲ್ಲದೆ ವಿದೇಶಿಗರಿಗೆ ಮನೆ ಬಾಡಿಗೆ ನೀಡಿದರೆ ಕ್ರಮ

ಬೆಂಗಳೂರು: ನಗರದಲ್ಲಿ ಮಾದಕ ಪದಾರ್ಥಗಳ ಸಂಗ್ರಹ ಮತ್ತು ಮಾರಾಟ ಮತ್ತಿತರ ಅಪರಾಧ ಪ್ರಕರಣಗಳಲ್ಲಿ ವಿದೇಶಿ ಪ್ರಜೆಗಳ ಕೈವಾಡ ಹೆಚ್ಚಾಗಿ ಕಂಡುಬರುತ್ತಿದ್ದು, ವಿದೇಶಿಗರು ಹೆಚ್ಚು ನೆಲೆಸಿರುವ ಈಶಾನ್ಯ ಹಾಗೂ ಪೂರ್ವ ವಿಭಾಗದಲ್ಲಿನ ಮನೆಗಳ ಮಾಲೀಕರಿಗೆ ಸಾರ್ವಜನಿಕ ಪ್ರಕಟಣೆಯ ಮೂಲಕ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಅಗತ್ಯ ದಾಖಲಾತಿಗಳನ್ನು ಪಡೆದುಕೊಳ್ಳದ ಹಾಗೂ ಸಿ ಫಾರ್ಮ್ ಸಲ್ಲಿಸದ ಮನೆಗಳ ಮಾಲೀಕರ ವಿರುದ್ಧ 'ರಿಜಿಸ್ಟ್ರೇಷನ್ ಆಫ್ ಫಾರಿನರ್ಸ್ ಆ್ಯಕ್ಟ್' ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕಡ್ಡಾಯ ನಿಯಮಗಳು: ಭಾರತೀಯ ವಿದೇಶಿಗರ ಕಾಯಿದೆಯ ಅನುಸಾರ ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆಗೆ ನೀಡುವಾಗ ಮಾಲೀಕರು ಅಥವಾ ಆ ಮನೆಗಳನ್ನು ನಿರ್ವಹಿಸುತ್ತಿರುವವರು ಆ ಪ್ರಜೆಗಳ ವಿವರಗಳನ್ನು (ಪಾಸ್‌ಪೋರ್ಟ್, ವೀಸಾ ಇತರೆ) 24 ಗಂಟೆಗೊಳಗಾಗಿ Indianfrro.gov.inನಲ್ಲಿ ಸಲ್ಲಿಸಬೇಕು. ಬಳಿಕ ಎಫ್‌ಆರ್‌ಆರ್‌ಒನಿಂದ ಸಿ-ಫಾರ್ಮ್ ಪಡೆದು ಸ್ಥಳೀಯ ಠಾಣೆಗೆ ಕಡ್ಡಾಯವಾಗಿ ಸಲ್ಲಿಸಬೇಕು. ಈ ನಿಯಮ ಉಲ್ಲಂಘಿಸಿ ಮನೆಗಳನ್ನು ಬಾಡಿಗೆಗೆ ನೀಡುವುದು ಶಿಕ್ಷಾರ್ಹ ಅಪರಾಧ. ಸಿ ಫಾರ್ಮ್ ಸಲ್ಲಿಸುವುದರಿಂದ ಆಯಾ ವ್ಯಾಪ್ತಿಯಲ್ಲಿ ನೆಲೆಸಿರುವ ವಿದೇಶಿಗರ ವೀಸಾ ಅವಧಿ, ವಾಸ ಸ್ಥಳದ ವಿಳಾಸ, ಆದಾಯದ ಮೂಲ, ಅವರ ಚಟುವಟಿಕೆಗಳ ಮೇಲೆ ಪೊಲೀಸರು ನಿಗಾವಹಿಸಲು ಅನುಕೂಲವಾಗುತ್ತದೆ. ಅಲ್ಲದೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವವರು, ವೀಸಾ ಅವಧಿ ಅಂತ್ಯವಾದವರನ್ನು ಅವರ ದೇಶಗಳಿಗೆ ಗಡಿಪಾರು ಮಾಡಲು ಸುಲಭವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವೀಸಾ ಅವಧಿ ಅಂತ್ಯವಾದ ಬಳಿಕವೂ ತಮ್ಮ ದೇಶಗಳಿಗೆ ಮರಳದೇ ಬೆಂಗಳೂರಿನಲ್ಲಿ ನೆಲೆಸುತ್ತಿರುವ ವಿದೇಶಿ ಪ್ರಜೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ವಿದ್ಯಾರ್ಥಿ, ವ್ಯವಹಾರ ಮತ್ತಿತರ ಕಾರಣಗಳಿಗಾಗಿ ವೀಸಾ ಪಡೆದು ಭಾರತಕ್ಕೆ ಬರುತ್ತಿರುವ ಕೆಲವು ವಿದೇಶಿ ಪ್ರಜೆಗಳು ಅಕ್ರಮ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿವೆ. ವಿಶೇಷವಾಗಿ ಡ್ರಗ್ ಪೆಡ್ಲಿಂಗ್, ವೇಶ್ಯಾವಾಟಿಕೆ, ಸೈಬರ್ ವಂಚನೆ ಪ್ರಕರಣಗಳಲ್ಲಿ ವಿದೇಶಿ ಪ್ರಜೆಗಳು ಭಾಗಿಯಾಗುತ್ತಿರುವುದು ಆತಂಕಕ್ಕೆ ಕಾರಣವಾಗುತ್ತಿದ್ದು ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಾಸ್ಕೋ ನಗರದಲ್ಲಿ ಸೋಮವಾರ ನಡೆದ ಇಂಟರ್‌ಫೇಯ್ತ್ ಡೈಲಾಗ್ ಕಾನ್‌ಕ್ಲೇವ್ ಸಭೆ ಆಯೋಜಿಸಲಾಗಿತ್ತು. ಈ ವೇಳೆ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಗುಜರಾತ್ ರಾಜಕೋಟ್‌ನ ಪರಮಾತ್ಮನಂದ ಸರಸ್ವತಿ ಸ್ವಾಮೀಜಿ, ರಷ್ಯಾದ ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿಗಳು, ಚಿಂತಕರು, ರಷ್ಯನ್ ಆರ್ಥಡಾಕ್ಸ್ ಚರ್ಚ್ ಧರ್ಮಗುರುಗಳು, ಭಾರತದ ಪ್ರತಿನಿಧಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕೆ.ಆರ್.ಪುರಂ ದೇವಸಂದ್ರದಲ್ಲಿರುವ ವಿದ್ಯಾ ವಿಜ್ಞಾನ್ ಶಾಲೆಯಲ್ಲಿ ಅದ್ಧೂರಿಯಾಗಿ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಜ್ಯೋತಿ ಪ್ರಭಾಕರ್, ಶಾಲಾ ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಹೆಣ್ಣು ಮಕ್ಕಳು ಮುಖ್ಯವಾಹಿನಿಗೆ ಬರಲಿ: ಜಗದೀಶ್

ಬೆಂಗಳೂರು: ಹೆಣ್ಣು ಮಗು ಮನೆಯ ನಂದಾ ದೀಪವಿದ್ದಂತೆ ಯಾವಾಗಲೂ ಬೆಳಗಲು ಬಿಡಿ. ಹೆಣ್ಣನ್ನು ಉಳಿಸಿ, ಕಲಿಸಿ, ಬೆಳಸಿ. ಹೆಣ್ಣು ಇರುವ ಮನೆಯು ನಂದಗೋಕುಲದಂತೆ, ಹೆಣ್ಣು ಮಕ್ಕಳಿಗೂ ಸಮಾಜದಲ್ಲಿ ಸಮಾನ ಅವಕಾಶಗಳಿದ್ದು, ಅವಕಾಶಗಳ ಸದುಪಯೋಗ ಪಡೆದುಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್.ಜಿ ತಿಳಿಸಿದರು

ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಕರಪತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯ, ಸಮಾನತೆ ಪ್ರತಿಯೊಬ್ಬ ಹೆಣ್ಣು ಮಗುವಿಗೂ ಸಿಗಬೇಕು. ಈ ಸಮಾಜದಲ್ಲಿ ಹೆಣ್ಣು ಮಕ್ಕಳು ಪ್ರಸ್ತುತ ಚಾಲಕನಿಂದ ಹಿಡಿದು ಪೈಲೆಟ್ ವವರೆಗೂ ಪುರುಷರ ಸರಿ ಸಮಾನವಾಗಿ ಮುಂದುವರೆಯುತ್ತಿದ್ದಾರೆ ಎಂದರು.

ಪ್ರಸ್ತಕ ದಿನಮಾನಗಳಲ್ಲಿ ಮಹಿಳೆಯರಿಗೆ ಬಹಷ್ಟು ಸೌಲಭ್ಯಗಳನ್ನು ನೀಡಲಾಗಿದ್ದು, ಅವುಗಳ ಸದುಪಯೋಗ ಪಡೆದುಕೊಂಡು ಮುಂದೆ ಬರಬೇಕು. ಮಹಿಳೆಯರ ಸಬಲೀಕರಣಕ್ಕಾಗಿ ಸರಕಾರ ಹಲವಾರು ಕಾರ್ಯಕ್ರಗಳನ್ನು ಜಾರಿಗೆ ತಂದಿದೆ. ಮಹಿಳೆಯರು ಸ್ವತಂತ್ರವಾಗಿ ಜೀವನ ನಡೆಸಿದಾಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಗಲಿದೆ ಎಂದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ ಮೇಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ.ಜಿ ಅವರು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಕರಪತ್ರ ಬಿಡುಗಡೆ ಮಾಡಿದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ ಮೇಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಯುವಕನ ಕೊಲೆ: 4 ಆರೋಪಿಗಳ ಸೆರೆ

ಕಲಬುರಗಿ: ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಯುವಕನ ಭೀಕರ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸರು, ಕೃತ್ಯ ನಡೆದ ಕೇವಲ 24 ಗಂಟೆಗಳಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳನ್ನು ಆನಂದ ಜಲಕ್ ಸಿಂಧೆ (34), ಆಶಿತೋಷ್ ಜಲಕ್ ಸಿಂಧೆ (30), ಇಮ್ರಾನ್ ಮೆಹಬೂಬ್ ಶೇಖ್ (28) ಮತ್ತು ಸೊಹೇಬ್ ಅನ್ವರ್ ಖುರೇಷಿ ಎಂದು ಗುರುತಿಸಲಾಗಿದೆ. ಸದ್ಯ ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಯ್ಯದ್ ಮೆಹಬೂಬ್ ಎಂಬಾತನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ, ನಂತರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕ್ರೂರವಾಗಿ ಹತ್ಯೆ ಮಾಡಿದ್ದರು. ಪ್ರಕರಣ ನಡೆದ 24 ಗಂಟೆಯಲ್ಲಿ ಆರೋಪಿಗಳನ್ನು ಪತ್ತೆ ಮಾಡಿರುವ ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಪರಪುರುಷನ ಜತೆ ಪತ್ನಿ ಪರಾರಿ: ಪತಿ ಆತ್ಮಹತ್ಯೆ

ದಾವಣಗೆರೆ: ಮದುವೆಯಾದ ಎರಡೇ ತಿಂಗಳಿಗೆ ಮತ್ತೊಬ್ಬನ ಜತೆ ಪತ್ನಿ ಪರಾರಿಯಾಗಿದ್ದಕ್ಕೆ ಪತಿ ಹರೀಶ್ (32) ಮನನೊಂದು ನೇಣಿಗೆ ಶರಣಾದ ಘಟನೆ

